ನಾನು ಬರೆದದ್ದು
ನಾಲ್ಕೆ ನಾಲ್ಕು ಸಾಲು
ನಾನು ಸತ್ತಾಗ
ಹೆಗಲು ಕೊಡೋದಕ್ಕೆ
ಇರಲಿ ಎಂದು

# ಅಮ್ಮ ಹಚ್ಚಿದ ಒಲೆ

ಬಿ.ಎಂ. ಬಶೀರ್

ಕವಿತೆಗಳು

ಇರುವೆ ಪ್ರಕಾಶನ

# ಅಮ್ಮ ಹಚ್ಚಿದ ಒಲೆ

ಬಿ.ಎಂ. ಬಶೀರ್

ಕವಿತೆಗಳು

ಇರುವೆ ಪ್ರಕಾಶನ
ಮಂಗಳೂರು

**Amma Hachchida Ole :** A Poem Collections By B.M. Basheer,
Published by Iruve Prakashana, Marvel Apartment, Flat No. 301,
1st cross, Shiva Nagara, Opp. Shrinivas College, Mangalore – 575 001.
Cell : 9448835621
e-mail: iruveprakashana@gmail.com
bmbasheer12@gmail.com

Copyright : ಲೇಖಕರದ್ದು
First Edition : 2015
Pages : 108
Size : 1/8th Demy
Paper Used : NS Maplitho 80 gsm
Copies : 1000
Price : 100/-

ಮೊದಲನೇ ಮುದ್ರಣ : 2015
ಪುಟಗಳು : 108
ಅಳತೆ : 1/8 ಡೆಮಿ
ಬಳಸಿರುವ ಕಾಗದ : ಎನ್.ಎಸ್. ಮ್ಯಾಪ್ಲಿತೋ 80 ಜಿಎಸ್ಎಂ
ಪ್ರತಿಗಳು : 1000

ಬೆಲೆ : ರೂ. 100/–

ಮುಖಪುಟ ವಿನ್ಯಾಸ : ಅರುಣ್ ಕುಮಾರ್ ಜಿ

ಪ್ರಕಾಶಕರು
**ಬಿ.ಎಂ. ಬಶೀರ್**
ಇರುವೆ ಪ್ರಕಾಶನ, ಮಂಗಳೂರು
ಮಾರ್ವೆಲ್ ಅಪಾರ್ಟ್‌ಮೆಂಟ್, ಮನೆ ಸಂಖ್ಯೆ 301,
ಮೊದಲ ತಿರುವು, ಶಿವನಗರ
ಶ್ರೀನಿವಾಸ್ ಕಾಲೇಜು ಎದುರು ರಸ್ತೆ,
ಪಾಂಡೇಶ್ವರ, ಮಂಗಳೂರು–575 001.
ಮೊಬೈಲ್ : 9448835621
ಇ–ಮೇಲ್: iruveprakashana@gmail.com
bmbasheer12@gmail.com

ಮುದ್ರಣ : ರೀಗಲ್ ಪ್ರಿಂಟ್ ಸರ್ವೀಸ್

# "ದೀಪದ ಸನ್ನೆಗಾಗಿ ಕಾಯುತ್ತಾ...."

ಪ್ರೀತಿಯ ಬಶೀರ್,

ಎಷ್ಟೋ ವರುಷಗಳ ಹಿಂದೆ ಮಾಟುಂಗಾದ ಕನ್ನಡ ಸಂಘದ ಪುಟ್ಟ ಕೋಣೆಯಲ್ಲಿ ಪುಸ್ತಕಗಳ ಕಪಾಟುಗಳ ನಡುವೆ ಪುಸ್ತಕಗಳಂತೆ ಕೂತ ಹತ್ತಿಪ್ಪತ್ತು ಆಪ್ತರ ನಡುವೆ ನೀನು ಕವಿತೆ ಓದಿದ್ದು ನನ್ನ ಉಜ್ವಲ ನೆನಪುಗಳಲ್ಲಿ ಒಂದು. ಭೋರ್ಗರೆಯುವ ಮಳೆಗಾಳಿಯ ನಡುವೆ ಹೆಮ್ಮರವೊಂದರಲ್ಲಿ ಸಿಕ್ಕಿಕೊಂಡು ಒದ್ದಾಡುವ ಗಾಳಿಪಟದ ಚಿತ್ರಣವಿತ್ತು ಅದರಲ್ಲಿ. ಊರಿನಿಂದ ತಂಗಿ ಬರೆದ ಪತ್ರದ ಒಕ್ಕಣಿಕೆಯಿತ್ತು. ನಂತರ ಬಂದ ನಿನ್ನ ಕವನ ಸಂಕಲನಕ್ಕೆ ನಿನ್ನದೇ ತೀವ್ರ ಸಾಲುಗಳನ್ನೇ ಪೋಣಿಸಿ ಹಿನ್ನುಡಿಯ ರೂಪದಲ್ಲಿ ಶುಭಾಶಯ ಹೇಳಿದ್ದೆ. "ಅಮ್ಮ ಹಚ್ಚಿದ ಒಲೆ"ಯ ಈ ಕವಿತೆಗಳೂ ಸಹ ಅದೇ ಕಾವಿನಲ್ಲಿ ನನ್ನನ್ನು ಆವರಿಸಿಕೊಂಡಿದೆ.

"ಅಮ್ಮ ಹಚ್ಚಿದ ಒಲೆ"ಯಿಂದಲೇ ಎಲ್ಲ ಜೀವಗಳ ಪಯಣದ ಶುರುವಾತು. ಅಕ್ಷರ ಕೇಂದ್ರವೇ ಆ ಒಲೆ. ಆ ಕಾವಿನ ವಿಸ್ತರಣೆಯೇ ನಮ್ಮೆಲ್ಲರ ವಿಕಾಸ. ಸ್ನಾನಕ್ಕೆ ನೀರೂ ಅಲ್ಲೇ ಕುದಿಯಬೇಕು, ಒಣಮೀನೂ ಅಲ್ಲೇ ಸುಡಬೇಕು, ಹಬ್ಬದ ಖೀರೂ ಅಲ್ಲೇ ಉಕ್ಕಬೇಕು...ಮಗುವಿನ ಹಾಲುಗೆನ್ನೆಯ ದಿಟ್ಟಿ ಬೊಟ್ಟಿನ ಕಪ್ಪೂ ಅಲ್ಲಿಂದಲೇ ಬರಬೇಕು... ರೂಪಕ ಎಂದು ಕರೆದರೆ ಜುಜುಬಿಯಾಗಿ ಬಿಡಬಹುದಾದ ಒಂದು ಪರಮ ಮೌಲ್ಯ

ಈ ಒಲೆ. ಮತ್ತು ಅದರ ಹಿಂದಿನ ಮಸಿ ಹಿಡಿದ ಗೋಡೆ. ಸಾಮಾಜಿಕ ಸಂಬಂಧಗಳೆಲ್ಲ ವ್ಯಸ್ತಗೊಂಡಿರುವ, ವ್ಯಗ್ರಗೊಂಡಿರುವ ಈ ನಮ್ಮ ಸಮಯದಲ್ಲಿ ಎಲ್ಲ ಗಾಯಗಳನ್ನೂ ಮಾಯಿಸಬಲ್ಲ ಏಕಮೇವ ಮದ್ದು ಪ್ರತಿ ಜೀವಿಯಲ್ಲಿರಬೇಕಾದ ತಾಯ್ತನ. ನಿನ್ನ ಈ ಎಲ್ಲ ರಚನೆಗಳೂ ಈ ತಾಯ್ತನವೆಂಬ ಆವರಣಕ್ಕಾಗಿನ ತೀವ್ರ ತುಡಿತಗಳಾಗಿವೆ. ಅವುಗಳ ಅಮೃತ ಹಸ್ತ ಸಹಜೀವಗಳನ್ನು ಸ್ಪರ್ಶಿಸಲು ಬೆಳಕಿನಂತೆ ಚಾಚುತ್ತಿವೆ.

ನಿನ್ನ ವೈಖರಿ ಚತುರೋಕ್ತಿಯದು. ಅನುರಣನಶೀಲವಾದ ಪುಟ್ಟ ಪುಟ್ಟ ಚಿತ್ರಿಕೆಗಳ ಮೂಲಕ ಈ ರಚನೆಗಳು ಜೀವಂತವಾದ ಒಂದು ಆವರಣವನ್ನು ಕಲ್ಪಿಸುತ್ತವೆ.

"ಒಳಗೆ ಅಮ್ಮ
ಅವಳ ನಿಟ್ಟುಸಿರಿನಂತೆ
ದೋಸೆ ಹುಯ್ಯುವ ಸದ್ದು...."

"ಗೋಡೆಯ ಮೇಲೆ
ಹೊಸ ಬಟ್ಟೆ
ಹೆಣದಂತೆ ತೂಗುತ್ತಿತ್ತು...."

"ತೊಟ್ಟು ಕಳಚಿ ಬಿದ್ದ ಕಂಬನಿ..."

ಇಂಥ ಚಿತ್ರಗಳು ವಾಚ್ಯಾರ್ಥ ತಿಳಿಯುವ ಮೊದಲೇ ಒಂದು ಆಳವಾದ ಅನುಭವವನ್ನು ಉಕ್ಕಿಸಬಲ್ಲವು. ಅದು ಹಾಗಾದಾಗಲೇ ಕವಿತೆ. ಹಾಗಂತ ಇದು ಹುಸಿ ರಮ್ಯತೆಯಿಂದ ಆಪ್ತವಾಗುವ ಭಾವುಕತೆಯಲ್ಲ. ಏಕೆಂದರೆ ಚಿಂತನೆಯ ಅಥವಾ ವೈಚಾರಿಕತೆಯ ಹಂಗಿಲ್ಲದ ಹುಸಿ ಭಾವುಕತೆಗೆ ಸಾಹಿತ್ಯದಲ್ಲಿ ಸ್ಥಾನವೇ ಇಲ್ಲ. ಮುಂಬಯಿಯ ಇನ್ನೊಬ್ಬ ಕವಿ ಮರಿಯಪ್ಪ ನಾಟೇಕರರ ಒಂದು ಸಾಲಿನಲ್ಲಿ, ನೀರಿನಲ್ಲೆಸೆದ ಕಲ್ಲಿನ ತರಂಗದ ಚಲನೆಯ ವರ್ಣನೆ ಬರುತ್ತದೆ. ಅಂದರೆ ಆಕಾರದಿಂದ ನಿರಾಕಾರದೆಡೆಗೆ ಚಲನೆ. ಒಳ್ಳೆಯ ಬರವಣಿಗೆಯ ಮುಖ್ಯ ಲಕ್ಷಣವೇ ಈ 'ನಿರಾಕಾರದೆಡೆ'ಗಿನ ಚಲನೆ. ನಿನ್ನ ಸಾರ್ಥಕ ರಚನೆಗಳಲ್ಲಿ ಈ ಗುಣವಿದೆ. ಒಂದು ಚಿತ್ರ, ಒಂದು ಯೋಚನೆ, ಒಂದು ಲಹರಿ ಆಕಾರ ತೊಡುತ್ತಿರುವಾಗಲೇ... ನಿರಾಕಾರದೆಡೆ ಚಲಿಸುವಂಥ ಧ್ವನಿ ತರಂಗ ಅದು. ಅದರ ಆಸ್ವಾದವೇ ಕವಿತೆಯ ಓದು. ಹೊರತು ವ್ಯಾಖ್ಯಾನವಲ್ಲ.

"ದೇವರ ಪಾದದ ಬಳಿ
ಚಿಟ್ಟೆಗಳಂತಿರುವ ಮಕ್ಕಳು
ಗಿಡಗಿಡಗಳಿಗೆ ಹಾರಿ
ಕಿತ್ತು ತಂದ ಹೂಗಳು..."

"ಅವಳ ಮಡಿಲಲ್ಲಿ ಮುಳುಗೇಳುತ್ತಿದ್ದ ಮಗು
ಪಕ್ಕನೆ ಅವಳ ಮುಖ ಪರಚಿಬಿಟ್ಟಿತು..."

"...ಇನ್ನೂ ಹೆರಿಗೆ ನೋವಿಗೆ ತೆರಿಗೆ
ಕಟ್ಟುತ್ತಿರುವ ಅಮ್ಮ...."

"...ದೇವರೇ..ಇನ್ನು ಮುಂದೆ
ಹೆಸರಿರುವ ಎಲ್ಲ ತಾಯಂದಿರು ಬಂಜೆಯರಾಗಲಿ
ಕೊಡುವುದಾದರೆ
ಕಸದ ತೊಟ್ಟಿಗಳಿಗೆ, ಗಟಾರಗಳಿಗೆ, ಬಸ್ ನಿಲ್ದಾಣಗಳಿಗೆ
ಹೆರಿಗೆ ಬೇನೆ ಕೊಡು..."

ಎಲ್ಲವನ್ನೂ ಬಲ್ಲ ಜೀವದ ಗೆಳೆಯನಿಗೇ, ತನ್ನ ಗೆಳೆತನದ ಬಗ್ಗೆ ಪುರಾವೆ ಕೊಡಬೇಕಾದ ಪ್ರಸಂಗ ಬಂದರೆ ಅದೆಂಥ ನೋವಿನದಾದೀತು. ಅಂಥ ಅವ್ಯಕ್ತ ಕಳವಳವೇ ನಿನ್ನ ಈ ಕವಿತೆಗಳನ್ನು ನಡುಗುವ ಕೈಗಳಲ್ಲಿ ಒಟ್ಟಿಗೆ ಹಿಡಿದಿವೆ. "ಆ...ಲಯದೊಳಗೆ" "ಚಿತ್ತಾಲರ ಜೊತೆ ಸಂಜೆ" "ಗುಜರಿ ಆಯುವ ಹುಡುಗ" "ರಮಝಾನ್ ಪದ್ಯಗಳು" "ಸ್ನೇಹ" "ಮೂರು ಬೆರಳುಗಳು" "ಧ್ಯಾನ" "ಅಮ್ಮನ ಕೊಳಲು" "ಭಾಮಿಯಾನ್‌ನಲ್ಲಿ ಬುದ್ಧ" "ಎರಡು ಮಂಚಗಳು" "ಕಳೆದು ಹೋದ ಬಾಲ್ಯ" "ಹುಷಾರು" "ನಮ್ಮ ಎದೆ" "ಮನೆ ಸೇರುವುದರೊಳಗೆ" "ಹೆಣ್ಣು ಮಲಗೋದು" "ಕಾಗೆ ಮರಿಯ ಹಾಡು" ಓದಿನಲ್ಲೂ ಬೆಳೆಯಬಲ್ಲ ರಚನೆಗಳಾಗಿವೆ. ಕವಿತೆಯೊಳಗಿನ ಅವ್ಯಕ್ತ, ಓದುಗನ ಅವ್ಯಕ್ತದೊಂದಿಗೆ ಸಜೀವ ಸಂಬಂಧ ಹೊಂದುವಂತಾಗುವ ರಚನೆಗಳಿವು. "ಮಗುವಿನ ಗಾಢ ನಿದ್ದೆ ಅವಳಿಗೆ ಧ್ಯಾನದಂತೆ ಭಾಸವಾಗಿದೆ" "ಮೌನಕ್ಕೆ ತಂದೆಯ ಗತ್ತು..."– ಇಂಥ ಸಾಲುಗಳು ಒಂದು ರಚನೆಗೆ ನೀಡುವ ಶಾರೀರ ಸೂಕ್ಷ್ಮವಾದದ್ದು. ಈ

ಸಾಲುಗಳು ಅನುಭವದಿಂದ ಹೊಮ್ಮಿದಷ್ಟೂ ಚತುರೋಕ್ತಿಗಳು ಚತುರತೆಯಿಂದ ಮೇಲೇಳುತ್ತವೆ.

"...ಹಸಿವನ್ನು ಹೂಡಿ ದಿನಸಿ ಅಂಗಡಿ ತೆರೆದ
ಗೆಲುವನ್ನು ಜವಳಿ ಅಂಗಡಿಗೆ ಮಾರಿ ಸೋತ
ಸೋರುವ ಸೂರನ್ನು ದಿಟ್ಟಿಸುತ್ತಾ ಹೆಂಚಿನ ವ್ಯಾಪಾರಕ್ಕಿಳಿದ
ದುಂದುಗಾರ ಅಪ್ಪ...ಸವಕಲು ಮಾತುಗಳನ್ನೇ
ನಾಣ್ಯಗಳಂತೆ ಚಲಾವಣೆಗೆ ಬಿಟ್ಟ
ಅಮ್ಮನ ಮೌನದ ತಿಜೋರಿಯನ್ನೇ ದೋಚಿದ..."

ನೋಡಲು ಸರಳವಾಗಿ ಕಾಣುವ ಇಂತಹ ಸಾಲುಗಳಿಗೆ ತೀವ್ರವಾದ ಕಥನ ವಿಸ್ತಾರವಿದೆ. ಏಕೆಂದರೆ, ಇವು ವರದಿಗಾರ ಕಲೆ ಹಾಕಿದ ವಿವರಗಳಲ್ಲ. ಇವು ಜೀವನವನ್ನು ಹಣ್ಣಾಗಿಸಿದ ಬಾಳಿನ ವಿವರಗಳು. ಕೊನೆಗೂ ನಮ್ಮೆಲ್ಲರ ಕಾಯಕ, ಸವಕಲು ಮಾತುಗಳನ್ನೇ ಉಜ್ಜಿ ಮತ್ತೆ ಚಲಾವಣೆಗೆ ಬಿಡುವುದಲ್ಲವೆ? ಮೌನದ ತಿಜೋರಿಯನ್ನೆಲ್ಲ ದೋಚುವುದಲ್ಲವೆ?

ನೀನು ಪೂರ್ವನಿಯೋಜಿತ ನಿಲುವನ್ನು ತೆಗೆದುಕೊಂಡು ತುಂಬಾ ನಿಷ್ಠನಾಗಿ ಬರೆದಾಗ ನಿನ್ನ ರಚನೆಗೆ ನಿಬಂಧ ರೂಪ ಬರುತ್ತದೆ. ಉದಾಹರಣೆಗೆ "ಬಲಿ ಹಬ್ಬದ ಬೆಳಗು", "ಮೊಬೈಲ್ ಹಾಡು" "ಅಮ್ಮ ಹಚ್ಚಿದ ಒಲೆ" ಈ ಕವಿತೆಗಳಿಗೆ ಭಿನ್ನವಾದ "ಹೌದು, ನಿಮ್ಮ ಅನುಮಾನ ಸರಿ" "ರಾವಣಾಯನ" "ಸಿಹಿಸುದ್ದಿ" ಕವಿತೆಗಳಲ್ಲಿ ಒಬ್ಬ ವಕ್ತಾರನಂತೆ ನೀನು ಮಾತನಾಡ ತೊಡಗಿದಾಗೆಲ್ಲ ಕವಿತೆ ತಾನಾಗಿಯೇ "ನೀನು ಮಾತಾಡಿಕೋ ಮಾರಾಯ, ನಾನು ಆಮೇಲೆ ಸಿಗ್ತೇನೆ" ಎಂದು ಸದ್ದಿಲ್ಲದೆ ಮಾಯವಾಗುತ್ತದೆ. ನಿನ್ನ ಹವಣಿಕೆ ಮೀರಿದ ಕ್ಷಣಗಳಲ್ಲೇ ನಿನ್ನ ಅತ್ಯುತ್ತಮ ಕಾವ್ಯ ಭಾಗಗಳಿವೆ. ಉದಾಹರಣೆ ನನ್ನನ್ನು ತುಂಬಾ ಸೆಳೆದ ಈ ಸಾಲು:

"....ಉಂಡ ಎಲೆಯಿಂದ ಬೇರ್ಪಡುವಂತೆ ಅವರು
ಪರಸ್ಪರ ಕಳಚಿಕೊಂಡಾಗ
ಅವನ ಮುಷ್ಟಿಯಿಂದ ಮೊಲೆಯನ್ನು ಬಿಡಿಸಿಕೊಂಡ ಅವಳು
ಕಳಚಿಟ್ಟ ಇಸ್ತ್ರಿಪೆಟ್ಟಿಗೆ ತುಂಬಾ ಮತ್ತೆ ಸುರಿವಳು ಕೆಂಡ...."

ಎವೆ ಕಳಚಿ, ಮುಷ್ಟಿ, ಮೊಲೆ, ಇಸ್ತ್ರಿ ಪೆಟ್ಟಿಗೆ, ಸುರಿವ ಕೆಂಡ–ಇವೆಲ್ಲ ತಂತಮ್ಮ ವೈಯಕ್ತಿಕ ಧ್ವನಿಯನ್ನಿಟ್ಟುಕೊಂಡೇ ಒಟ್ಟಿಗೇ ಸಾಧಿಸುವ ಪರಿಣಾಮ ವಿಶಿಷ್ಟ. 'ನಿನ್ನ ಕವಿತೆಯ ಉಸಿರಾಟ ಇಂತಹ ಭಾಗಗಳಲ್ಲೇ ಇದೆ. ಇವೆಲ್ಲ ಹವಣಿಕೆಯಿಂದ, ಆಲೋಚನೆಯಿಂದ, ಎಚ್ಚರದ ವಿನ್ಯಾಸದಿಂದ ಆಗುವಂತಹದಲ್ಲ. ಗೊತ್ತಿರುವ ಬಿಡಿಗಳ ಮೂಲಕ ಗೊತ್ತಿರದ ಇಡಿಗಾಗಿ ಒದ್ದಾಡುವಾಗಲೇ ಆಗುವಂತಹದ್ದು.

....ಎಳೆ ಕಂಬನಿಯಂತಿರುವ ಆ ನಾಕು ಸಾಲುಗಳು...

....ಫ್ರಿಜ್ಜಿನಲ್ಲಿಟ್ಟ ತರಕಾರಿಯಂತೆ ಅಕ್ಕಪಕ್ಕ
ಕುಳಿತ ಕಣ್ಣುಗಳು....

ಇಂತಹ 'ಬಿಡಿಗಳು' ಆಯಾ ಕ್ಷಣದಲ್ಲಿ ತಾಜಾ ಅನಿಸುತ್ತಾ ಬೇರೊಂದು ಆಳವಾದ ವ್ಯಾಪಕವಾದ ಅನುಭವದೆಡೆ ನಮ್ಮನ್ನು ನೂಕಿದಾಗಲೇ ಅವುಗಳ ಸಾರ್ಥಕತೆ. ನಮ್ಮ ಅಕ್ಕರೆಯ ಮುಂಬಯಿಯ ಹಿರಿ ಕವಿ ವಿ.ಜಿ. ಭಟ್ಟರ ಒಂದು ಸಾಲು ಹೀಗಿದೆ– "ಅಮರ ಲೋಕದ ಕಿಡಕಿಗಳಂಥ ಕಣ್ಣುಗಳನ್ನು ಕಂಡೆನು" ಪ್ರಪಂಚದ ಎಲ್ಲ ಕವಿತೆಗಳೂ ತಮ್ಮದೇ ರೀತಿಯಲ್ಲಿ ತಮ್ಮದೇ ಆದ ಅಮರಲೋಕವೊಂದಕ್ಕೆ ತೆರೆದ ಕಿಡಕಿಗಳೇ ಆಗಿವೆ. ಅಂತಹ, ನಮ್ಮೆಲ್ಲರನ್ನೂ ಉಳಿಸುವಂತಹ, ಬೆಳೆಸುವಂತಹ ಗಹನವಾದ, ಘನವಾದ, ಅಮರಲೋಕವೊಂದು ನಿನ್ನ ಮನದೊಳಗೇ ನಿನ್ನ ಬರವಿಗಾಗಿ ಕಾದಿದೆ. ಈ ಫೇಸ್‌ಬುಕ್ಕು, ಟ್ವಿಟ್ಟರು, ಒಂದೊಂದು ಸಾಲನ್ನು ಎರಡೆರಡು ಸಲ ಓದಿ ಶ್ರುತಿ ಕಳೆದುಕೊಂಡಿರುವ ನೀರಸ ಕರ್ಕಶಗೊಂಡಿರುವ ಕವಿಗೋಷ್ಠಿಗಳು, ಬಿಡುಗಡೆ ಸಮಾರಂಭದ ನಿರೂಪಕರು...ಇಂತಹದೆಲ್ಲ ನರ್ತನವನ್ನು ಚೂರು ಬದಿಗಿಟ್ಟು ನಾವೆಲ್ಲ ಖಾಲಿ ಕಾಗದದ ಅಸೀಮ ಚಡಪಡಿಕೆಗೆ ಶರಣಾಗಬೇಕಾಗಿದೆ. ಯಾವ "ದೀಪದ ಸನ್ನೆಗಾಗಿಯೂ ಕಾಯದೆ..."ಅಮ್ಮನ ಒಲೆಯೆದುರಿನ ಊದುಗೊಳವೆಯ ನಾದದ ಜಾಡಿನಲ್ಲೇ, ಅಶರೀರದ ಅಂಚಿನಲ್ಲಿರುವ ನಿರಾಕಾರದ ಎಟುಕಿನಲ್ಲಿರುವ ಆವರಣದೆಡೆಗೆ ಚಲಿಸಬೇಕಾಗಿದೆ.

"ಇಬ್ಬರೆಂದರೆ ಬರೇ ಇಬ್ಬರು
ನಾನು ಮತ್ತು ಅವರು
ಹಾಯಿ ದೋಣಿಯಂತೆ ತೇಲುತ್ತಿರುವ
ಕತೆಯ ಸಾಲೊಂದನ್ನು ಏರಿ ಕುಳಿತಿದ್ದೇವೆ

"ಮೊರೆವ ಎದೆಯೊಳಗೆ
ಭೋರ್ಗರೆವ ಅಕ್ಷರದ ಕಡಲು
ಕತೆಗಾರ ನನ್ನ ಪಕ್ಕದಲ್ಲೇ ಅಂಬಿಗನಂತೆ
ಹುಟ್ಟು ಹಾಕುತ್ತಿರುವಾಗ
ನನಗೇಕೆ ಮುಳುಗುವ ಚಿಂತೆ..."

ನಿನ್ನ ಈ ಸರಳ ಸಾಲುಗಳಲ್ಲಿರುವ ಅಭಯ, ಸಮಾಧಾನ ಅದ್ವಿತೀಯವಾದದ್ದು. ಹೆಗಲ ಮೇಲೆ ಆಧಾರಕ್ಕೆಂದು ಇಟ್ಟಿದ್ದ ಸೋದರನ "ಹೂವಿನ ಎಸಳಿನಷ್ಟೇ ಭಾರವಾದ ಮೂರು ಬೆರಳಿನಷ್ಟೇ" ಭಂಗುರವಾದದ್ದು.

ಇದನ್ನು ಜೋರು ಮಳೆಯಲ್ಲಿ ಗೋಕರ್ಣದಲ್ಲಿ ಬರೆಯುತ್ತಿದ್ದೇನೆ. ಮಳೆಯಲ್ಲಿ ಭೋರ್ಗರೆವ ಸಮುದ್ರದಲ್ಲಿ ಉರುವಲು ಒಲೆ ಸೌದೆಗಾಗಿ ಮನುಜಾಕೃತಿಗಳು ಯುದ್ಧೋಪಾದಿಯಲ್ಲಿ, ಉಕ್ಕುವ ತೆರೆಗಳೊಂದಿಗೆ ಸೆಣಸಾಡುತ್ತಿವೆ. ತಮ್ಮ ತಮ್ಮ ಒಲೆಗಳನ್ನು ಬೆಚ್ಚಗಿಡಲು ನಡೆಯುತ್ತಿರುವ ಒಂದು ಮಹಾ ಜಲ ಯಜ್ಞ ಇದು. ಇದೇ ಮಳೆ ಧಾರಾವಿಯಲ್ಲೂ ಬೀಳುತ್ತಿದೆ. ಅಲ್ಲಿ ಮಳೆಯಿಂದ ಒಲೆಯನ್ನು ಬಚಾವು ಮಾಡಲು ಅಮ್ಮಂದಿರು ಹೋರಾಡುತ್ತಿದ್ದಾರೆ. ಎಲ್ಲ ರಾಜಕೀಯ ಸಮರ್ಪಕತೆಯ ಮೂತಿಗೆ ತಿವಿಯುವಂಥ ಸಮರ ಇದು. 'ಮಾನವೀಯತೆ' ಬಗ್ಗೆ ಚಂದವಾಗಿ ಎಲ್ಲರೂ ಮಾತಾಡಿದ್ದೇವೆ. ಚಿತ್ತಾಲರು ಪದೇ ಪದೇ ಹೇಳುವ 'ಮಾನವಂತಿಕೆ' ನಮ್ಮೆಲ್ಲರ ಪದಯಾತ್ರೆಯ ಜೀವಾಳವಾಗಲಿ ಎಂದು ಹಾರೈಸೋಣ.

ವಾತ್ಸಲ್ಯಪೂರ್ವಕ
**ಜಯಂತ ಕಾಯ್ಕಿಣಿ**

# ಇರುವೆಯ ಹೆಜ್ಜೆ

ನನ್ನೊಳಗಿನ ಪತ್ರಕರ್ತನ ಕಣ್ಣು ತಪ್ಪಿಸಿ ಬರೆದ ಒಂದಿಷ್ಟು ಪದ್ಯಗಳು ಇಲ್ಲಿವೆ. ಸವತಿಯರಂತೆ ನನ್ನೊಳಗೆ ಬದುಕುತ್ತಿರುವ ಪತ್ರಕರ್ತ ಮತ್ತು ಕವಿಯಲ್ಲಿ ನನಗೆ ಯಾರು ಇಷ್ಟ ಎನ್ನುವುದು ಇನ್ನೂ ನನಗೆ ಸ್ಪಷ್ಟವಾಗಿಲ್ಲ. ಬಹುಶಃ ಅದನ್ನು ಸಹೃದಯನೇ ನಿರ್ಧರಿಸಿ ಹೇಳಬೇಕು. ಪತ್ರಕರ್ತನೊಬ್ಬ ಕವಿಯಾಗುವುದು, ಕವಿಯೊಬ್ಬ ಪತ್ರಕರ್ತನಾಗುವುದು ತನ್ನೊಳಗೇ ಎರಡಾಗಿ ಒಡೆದುಕೊಂಡಂತೆ. ಪ್ರತಿ ದಿನದ ಇವರ ನಡುವಿನ ಜಗಳಗಳಿಂದ ನಾನು ಹೈರಾಣಾಗಿದ್ದೇನೆ. ಇಬ್ಬರೂ ಒಮ್ಮೊಮ್ಮೆ ತಮ್ಮ ತಮ್ಮ ಗೆರೆಗಳನ್ನು ದಾಟಿ ಒಬ್ಬರ ಜಾಗವನ್ನು ಇನ್ನೊಬ್ಬರು ಕಬಳಿಸಲು ಯತ್ನಿಸುವುದಿದೆ. ಆಗೆಲ್ಲ ಅವರನ್ನು ಮತ್ತೆ ಅವರವರ ಜಾಗಕ್ಕೆ ತಂದು ಕೂರಿಸುವುದು ಸಣ್ಣ ಕೆಲಸವೇನೂ ಅಲ್ಲ. ನಾನು ಒಬ್ಬಂಟಿಯಾಗಿದ್ದಾಗ, ನೊಂದುಕೊಂಡಾಗ, ಸಂಕಟದಲ್ಲಿದ್ದಾಗ ಅಥವಾ ಒಂದು ಅಪೂರ್ವವಾದ ಅನುಭೂತಿಯ ಜೊತೆಗೆ ತನ್ಮಯನಾಗಿದ್ದಾಗ ಸಂಪೂರ್ಣ ಮುಳುಗಿ ಹೋಗದಂತೆ ನನ್ನನ್ನು ಕೈ ಹಿಡಿದು ತೇಲಿಸಿದ್ದು ನನ್ನೊಳಗಿನ ಕವಿ. ಒಮ್ಮೊಮ್ಮೆ ಅನ್ನಿಸುತ್ತದೆ, ನಾನು ಕವಿಯಾಗಿರುವುದಕ್ಕೇ ನನ್ನ ಹೆಚ್ಚಿನ ಸ್ನೇಹಿತರು ಇನ್ನೂ ನನ್ನನ್ನು ಹಚ್ಚಿಕೊಂಡಿದ್ದಾರೆ. ನನ್ನ ದುರಹಂಕಾರಗಳನ್ನು ಕ್ಷಮಿಸಿದ್ದಾರೆ.

ನನ್ನ ಕವಿತೆಗಳ ಬೆನ್ನಿಗೆ ನಿಂತ ನೂರಾರು ಆತ್ಮೀಯರಿದ್ದಾರೆ. ಅವರೆಲ್ಲರೂ ನನ್ನ ಕವಿತೆಗಳ ಸಾಲುಗಳಲ್ಲಿ ಒಂದಾಗಿದ್ದಾರೆ. ಇದೇ ಸಂದರ್ಭದಲ್ಲಿ 'ಅಮ್ಮ ಹಚ್ಚಿದ ಒಲೆ' ಈ ಕೃತಿ ಹೊರಬರಲು ಕಾರಣರಾದ ಕೆಲವರನ್ನು ನೆನೆದುಕೊಳ್ಳುವುದು ನನ್ನ ಕರ್ತವ್ಯವಾಗಿದೆ. ಈ ಸಂಕಲನಕ್ಕೆ ಮುನ್ನುಡಿ ಬರೆದುಕೊಟ್ಟ ನನ್ನ ಪ್ರೀತಿಯ ಕವಿ ಜಯಂತ ಕಾಯ್ಕಿಣಿ, ನಾನು ದುಡಿಯುತ್ತಿರುವ ವಾರ್ತಾಭಾರತಿ ದಿನ ಪತ್ರಿಕೆ, ಅದರ ಪ್ರಧಾನ ಸಂಪಾದಕರಾದ ಅಬ್ದುಸ್ಸಲಾಂ ಪುತ್ತಿಗೆ, ಗೌರಿ ಲಂಕೇಶ್, ಅವಧಿಯ ಜಿ. ಎನ್. ಮೋಹನ್, ಸೋದರ ಮುಹಮ್ಮದ್ ಮುಸ್ಲಿಮ್, ಮುಂಬೈ ಗೆಳೆಯರು, ಫೇಸ್‌ಬುಕ್‌ನ ಗೆಳೆಯರು, ಮುದ್ರಣ ತಪ್ಪುಗಳನ್ನು ತಿದ್ದಿದ ಮುಹಮ್ಮದ್ ಕುಳಾಯಿ, ಕಲಾವಿದ ಅರುಣ್‌ಕುಮಾರ್ ಜಿ., ಸತೀಶ್ ಕಲ್ಮಾಡಿ, ನನ್ನ ಇರುವೆ ಪ್ರಕಾಶನದ ಜೊತೆಗಿರುವ ಬಾಲ್ಯದ ಗೆಳೆಯ, ಬಂಧು ಮುಸ್ತಫಾ ಬಾಂಬಿಲ....ಹೀಗೆ ಪಠಿಸಿದಷ್ಟು ಮುಗಿಯದ ಹೆಸರುಗಳು ಇವು. ಎಲ್ಲರಿಗೂ ಕೃತಜ್ಞ. ಇಲ್ಲಿರುವ ಎಲ್ಲ ಕವಿತೆಗಳು ನಿಮ್ಮೊಳಗೆ ಹೊಸದಾಗಿ ಬೆಳೆಯಲಿ ಎಂದು ಆಶಿಸುವೆ.

**ಬಿ.ಎಂ. ಬಶೀರ್**

**ಅರ್ಪಣೆ**

ಮುಂಬಯಿಯ
ಕನ್ನಡದ ಓಣಿಗಳಲ್ಲಿ ನನ್ನನ್ನು
ಕೈ ಹಿಡಿದು ನಡೆಸಿದ
ಅಣ್ಣ ಸಾ. ದಯಾ(ದಯಾನಂದ ಸಾಲಿಯನ್)ಗೆ

# ಒಳಗಿನ ಬೆಂಕಿ


ಆ...ಲಯದೊಳಗೆ..... 15
ಚಿತ್ತಾಲರ ಜೊತೆ ಸಂಜೆ... 16
ಚಿಟ್ಟೆ... 18
ಗುಜರಿ ಆಯುವ ಹುಡುಗ! 19
ರಮಝಾನ್ ಪದ್ಯಗಳು 21
ಬಾಗಿಲು 23
ಕಳಚಿಟ್ಟು ಬಾ ಒಳಗೆ... 24
ದೇಶ 26
ಅನಾಥ ಸಾಲುಗಳು... 27
ಸಂಜೆಯ ಹೆಗಲಲ್ಲಿ ಹೆಣ 28
ಹನಿ ಕವಿತೆಗಳು 30
ಕೈದಿ 33
ಅನಿ ಮತ್ತು ದೇವರು! 34
ಬಲಿ ಹಬ್ಬದ ಬೆಳಗು 36
ಕ್ಷಮೆಗೆ ಕ್ಷಮೆಯಿಲ್ಲ 39
ಮೂರು ಬೆರಳುಗಳು! 41
ಸ್ನೇಹ 44
ಕೊಳಲು 45
ಭಾಗ್ಯರೇಖೆ 46
ಹೆಸರಿಲ್ಲದ ದೇವರಲ್ಲಿ ಹೆಸರಿಲ್ಲದ ನಾನು... 47
ಹೌದು, ನಿಮ್ಮ ಅನುಮಾನ ಸರಿ! 49

ಧ್ಯಾನ ........ 51
ಮೊಬೈಲ್ ಹಾಡು...! ........ 52
ನನ್ನಜ್ಜನಜ್ಜನಜ್ಜನ ಮತಾಂತರ ಪ್ರಸಂಗ ........ 55
ಅಮ್ಮನ ಕೊಳಲು ........ 59
ರಾವಣಾಯನ ........ 61
ಎರಡು ಮಂಚಗಳು ........ 63
ಕಳೆದು ಹೋದ ಬಾಲ್ಯ.... ........ 64
ನಾಲ್ಕೇ ನಾಲ್ಕು ಸಾಲು ........ 66
ಆತ್ಮಕತೆ ........ 67
ಅಮ್ಮ ಹಚ್ಚಿದ ಒಲೆ! ........ 69
ಹುಷಾರು! ........ 71
ಸಿಹಿ ಸುದ್ದಿ.....! ........ 73
ಒಂದಿಷ್ಟು ಪದ್ಯಗಳು ........ 75
ಮೈಸೂರ್ ಪಾಕ್ ಮತ್ತು ಇತರ ಕವಿತೆಗಳು ........ 77
ಮಾವಿನ ಗೊರಟೆ ಮತ್ತು ಇತರ ಕವಿತೆಗಳು ........ 80
ಮನೆ ಸೇರುವುದೆಂದರೆ.... ........ 82
ಹೆಣ್ಣು ಮಲಗೋದು...! ........ 83
ನಿನ್ನ ಎದೆ ........ 85
ಬಾಮಿಯಾನ್‌ನಲ್ಲಿ ಬುದ್ಧ ........ 86
ಕಾಗೆ ಮರಿಯ ಹಾಡು ........ 87
ನಿನ್ನೆ ಉದುರಿದ ಹನಿಗಳು ........ 89
ಚದುರಿದ ಪದಗಳು ........ 91
ಹೆಬ್ಬೆರಳು ........ 92
ಉಂಗುರ ........ 94
ಪುಸ್ತಕ ........ 96
ಇರುವೆಗೆ ........ 97
ಪ್ರತಿಧ್ವನಿ ........ 98
ಹನಿಗಳಲ್ಲಿ ಇರುವೆ ........ 100
ಕಂಡದ್ದೆಲ್ಲಾ ಕಣ್ಣು ... ........ 102
ಹೊಸತು ........ 105
ಮಳೆ ನಿಂತ ಮೇಲೆ... ........ 107

# ಆ...ಲಯದೊಳಗೆ.....

ನಾದವೊಂದು
ಮಂಜಿನ ಎದೆಯ ಕದ ತೆರೆದು
ಮುಂಜಾವಿನ ಮೊಂಬತ್ತಿ
ತಂದು ಹಚ್ಚಿಟ್ಟ ಹೊತ್ತು

ಮೌನಕ್ಕೆ
ತಂದೆಯ ಗತ್ತು!

ಅದುರುವ ಚಿಗುರೆಲೆಯ ಮೇಲೆ
ಒಂದೇ ಒಂದು ಹನಿ
ಕಣ್ಣೆವೆಯ ತೊಟ್ಟು
ಕಳಚಿ ಬಿದ್ದ ಕಂಬನಿ!

ನಿನ್ನೆಯ ಸಂಜೆ
ಹರೆಯಕ್ಕೆ ಲಜ್ಜೆಯ ಬಣ್ಣ
ಬಳಿದ ಹುಡುಗಿ
ತಾಯಿ ಹೆಜ್ಜೆಯಲ್ಲಿ
ಇನ್ನಿಲ್ಲದಂತೆ...
ಆ ಲಯದೊಳಗೆ ಕರಗಿ...

ದೇವರ ಪಾದದ ಬಳಿ
ಚಿಟ್ಟೆಗಳಂತಿರುವ ಮಕ್ಕಳು
ಗಿಡಗಿಡಗಳಿಗೆ ಹಾರಿ
ಕಿತ್ತು ತಂದ ಹೂವುಗಳು!

# ಚಿತ್ತಾಲರ ಜೊತೆ ಸಂಜೆ...

ಕೇಳಿದರು
ಎಲ್ಲಿಂದ ಬಂದೆ?
ನಿಮ್ಮೆದೆಯಿಂದ
ಎಂದೆ

ದಿನವಿಡೀ ದುಡಿದು
ಬಳಲಿದ ಶಹರದಂತೆ ಒರಗಿದರು
ಆ ಸೋಫಾದಲ್ಲಿ
ಕೇಳಿದೆ ಇಲ್ಲಿ
ಯಾವ ಒಳದಾರಿಯಲ್ಲಿ ನಡೆದರೆ
ಹನೇಹಳ್ಳಿ?

ಅಲ್ಲಲ್ಲಿ ಬಿತ್ತಿ
ಬೆಳೆಸಿದ ಮೌನ-
ದ ಗಿಡದಲ್ಲಿ ಮಾತು
ಚಿಗುರುವ ಹೊತ್ತು
ಅಸಂಖ್ಯ ಬೋಗಿಗಳನ್ನು ಹೊತ್ತ
ಗಾಡಿಯೊಂದು
ದೀಪದ ಸನ್ನೆಗಾಗಿ ಕಾಯುತ್ತಿತ್ತು!

ತೆರೆದ ಬಾಲ್ಕನಿಯಾಚೆ
ಶಹರವನ್ನು ಆಳುವ ಕಡಲು
ಬೀಸುವ ಗಾಳಿಗೆ
ಪಟಪಟನೆ ಬಡಿದುಕೊಳ್ಳುವ ಅದರ
ರಕ್ತವರ್ಣದ ಸೆರಗು
ತೆಕ್ಕೆಯಲ್ಲಿ ಅಧರಕ್ಕೆ ಅಧರ
ಒತ್ತೆ ಇಟ್ಟವರು!

ಇಬ್ಬರೆಂದರೆ ಬರೇ ಇಬ್ಬರು
ನಾನು ಮತ್ತು ಅವರು
ಹಾಯಿ ದೋಣಿಯಂತೆ ತೇಲುತ್ತಿರುವ
ಕತೆಯ ಸಾಲೊಂದನ್ನು
ಏರಿ ಕುಳಿತಿದ್ದೇವೆ...

ಮೊರೆವ ಎದೆಯೊಳಗೆ
ಭೋರ್ಗರೆವ ಅಕ್ಷರದ ಕಡಲು
ಕತೆಗಾರ ನನ್ನ ಪಕ್ಕದಲ್ಲೇ ಅಂಬಿಗನಂತೆ
ಹುಟ್ಟು ಹಾಕುತ್ತಿರುವಾಗ
ನನಗೇಕೆ ಮುಳುಗುವ ಚಿಂತೆ...?

# ಚಿಟ್ಟೆ

ಚಿಟ್ಟೆಯೊಂದು
ನನ್ನ ಕಣ್ಣ ಕಿಟಕಿಯನ್ನು ಮುರಿದು
ಹೃದಯದೊಳಗೆ
ಇಳಿಯಿತು

ಅತಿಥಿ ಎಂದು ನಂಬಿ
ಹೃದಯವನ್ನೇ ಕೊಟ್ಟೆ

ಪ್ರಾಣ ಮಕರಂದವನು ಹೀರಿ
ಉಸಿರಿನ ಜೊತೆ
ಕೊರೆದು ದಾರಿ
ಹೋಯಿತು ಹಾ...ರಿ!

# ಗುಜರಿ ಆಯುವ ಹುಡುಗ!

ಕಾಯಿ ವ್ಯಾಪಾರಕ್ಕೆ ಸಂತೆಗೆ ಬಂದ
ಬ್ಯಾರಿಯಂತೆ ಅಪ್ಪ
ಹುಟ್ಟಿದ

ಗಿಡದಲ್ಲಿ ತೂಗುವ ಮಾವು
ಗೇರು, ಆಗಷ್ಟೇ ಕಣ್ಣು ಬಿಟ್ಟ ಗೊನೆ
ಹೂವು ಎಲ್ಲವನ್ನು
ಸರಕಿನಂತೆ ನೋಡಿದ

ವ್ಯಾಪಾರವೆನ್ನುವುದು ಅವನಿಗೆ
ಜೂಜಿನಂತೆ ಅಂಟಿತು
ಬದುಕನ್ನೇ ಒತ್ತೆ ಇಟ್ಟು
ಆಡಿದ

ಹಸಿವನ್ನು ಹೂಡಿ
ದಿನಸಿ ಅಂಗಡಿ ತೆರೆದ
ಗೆದ್ದ
ಗೆಲುವನ್ನು ಜವಳಿ ಅಂಗಡಿಗೆ
ಮಾರಿ ಸೋತ...
ಸಾಲಕ್ಕೆ ಹಳೆಯ
ಹೆಂಚನ್ನೇ ಮಾರಿದ
ಸೂರುವ ಸೂರನ್ನು
ದಿಟ್ಟಿಸುತ್ತಾ ಹೆಂಚಿನ ವ್ಯಾಪಾರಕ್ಕಿಳಿದ

ಗಂಜಿಗೆ ನೆಂಜಿಕೊಳ್ಳುವುದಕ್ಕೆಂದು
ತಂದ ಸಿಗಡಿಯ ರುಚಿ ಹಿಡಿದು
ಕಡಲ ತಡಿಗೆ ಹೋದ
ಮೀನಿನ ವ್ಯಾಪಾರಕ್ಕಿಳಿದ

ದುಂದುಗಾರ ಅಪ್ಪ
ಸವಕಲು ಮಾತುಗಳನ್ನೇ
ನಾಣ್ಯಗಳಂತೆ ಚಲಾವಣೆಗೆ ಬಿಟ್ಟ
ಅಮ್ಮನ ಮೌನದ ತಿಜೋರಿಯನ್ನೇ
ದೋಚಿದ

ಜೂಜಿನ ನಿಯಮವ ಮರೆತು
ನಂಬಬಾರದವರನ್ನೆಲ್ಲ ನಂಬಿದ
ಸೋಲಿನ ರುಚಿಯನ್ನು ಹಿಡಿದ
ಸೋಲಿಗಾಗಿಯೇ ಆಡ ತೊಡಗಿದ...

ಕೊನೆಗೆ ಎಲ್ಲ ಬಿಟ್ಟು
ಗುಜರಿ ಅಂಗಡಿ ಇಟ್ಟ
ಹರಿದ ಚಪ್ಪಲಿ, ತುಕ್ಕು ಹಿಡಿದ ಡಬ್ಬ
ಮುರಿದ ಬಕೀಟುಗಳ ರಾಶಿಯ
ನಡುವೆ ಆ
ರಾಮ ಕುರ್ಚಿಗೆ ಒರಗಿದ
ಅವನ ಮೌನದ ತಿಜೋರಿ ತುಂಬಾ
ಸಾಲ ಪತ್ರಗಳು
ಅಂಗಡಿಯ ಬಾಗಿಲಲ್ಲಿ
ಕಾಲ
ವಸೂಲಿಗೆಂದು ಕುಕ್ಕರಗಾಲಿನಲ್ಲಿ ಕೂತಿದ್ದಾನೆ

ನಾನು ಅವನ ಮಗ
ಅವನ ಮೌನದ ಮನೆಯ
ಹಿತ್ತಲಲ್ಲಿ ನಿಂತ
ಗುಜರಿ ಆಯುವ ಹುಡುಗ

# ರಮಝಾನ್ ಪದ್ಯಗಳು

ನಾನು ತುಕ್ಕು ಹಿಡಿದ ಕಬ್ಬಿಣ
ಹಸಿವಿನ ಕುಲುಮೆಯಲ್ಲಿ
ಧಗಿಸಿ ಹೊರ ಬಂದಿದ್ದೇನೆ
ಈಗಷ್ಟೇ ಸ್ನಾನ ಮುಗಿಸಿದ
ನವಜಾತ ಶಿಶುವಿನಂತೆ
ಬೆಳಗುತ್ತಿದ್ದೇನೆ

ಮೇಲೊಬ್ಬ ಕಮ್ಮಾರ
ಬಾಗಿದ್ದೇನೆ ಅವನ ಮುಂದೆ
ಉಳುವವನಿಗೆ ನೊಗವೋ
ಮನೆಗೊಂದು ಕಿಟಕಿಯೋ
ಬಾಗಿಲಿಗೆ ಚಿಲಕವೋ, ಬೀಗವೋ
ಅಥವಾ ಧರಿಸುವುದಕ್ಕೆ ಖಡ್ಗವೋ

ಎಲ್ಲಾ ಅವನ ಲೆಕ್ಕಾಚಾರ

2
ನಡು ರಾತ್ರಿ
ಅತ್ತಾಳಕ್ಕೆಂದು ಮಗನ
ಎಬ್ಬಿಸ ಬಂದ ತಾಯಿ
ತಲ್ಲಣಿಸಿ ನಿಂತಿದ್ದಾಳೆ

ಮಗುವಿನ ಗಾಢ ನಿದ್ದೆ
ಅವಳಿಗೆ ಧ್ಯಾನದಂತೆ ಭಾಸವಾಗಿದೆ!

3
ರಮಝಾನ್ ದಿನಗಳು
ಅಮ್ಮನ ಕೆನ್ನೆಯ ಓಣಿಗಳಲ್ಲಿ
ಕಣ್ಣ ಹನಿಗಳಾಗಿ
ಉದುರಿ ಹೋಗುತ್ತಿವೆ

ಒಬ್ಬಂಟಿ ಕುಳಿತು
ಜಪಮಣಿಯಂತೆ
ಅವಳದನ್ನು ಎಣಿಸುವಳು

4
ನನ್ನ ದ್ವೇಷ
ಹಸಿವಿನ ಬೆಂಕಿಯಲ್ಲಿ ಬೂದಿಯಾಗಿದೆ
ಏನು ಹೇಳಲಿ ಕರುಣಾಳುವಿನ ಕೃಪೆಯ?
ಮಸೀದಿಯಲ್ಲಿ ಕ್ಷಮೆಯ
ಉಡುಗೊರೆಯೊಂದಿಗೆ
ಕಾಯುತ್ತಿದ್ದಾನೆ ಗೆಳೆಯ!

# ಬಾಗಿಲು

ಕಳ್ಳರಿಗೆ ಹೆದರಿ ಮುಂಬಾಗಿಲು ಮುಚ್ಚಿಟ್ಟೆ
ಆದರೆ ದುರದೃಷ್ಟ ನೋಡಿ...
ಒಳ ಬರಬೇಕಾದ ನನ್ನವರೆಲ್ಲ
ಮುಚ್ಚಿದ ಬಾಗಿಲು ನೋಡಿ
ಹಾಗೆಯೇ ಮರಳಿದರು...

ಕಳ್ಳನೋ ಹಿತ್ತಲಿಂದ ಕನ್ನ ಕೊರೆದು
ಮನೆಯನ್ನು ದೋಚಿ ಹೋಗಿದ್ದಾನೆ!

# ಕಳಚಿಟ್ಟು ಬಾ ಒಳಗೆ...

ಒಳ ಬರುವ ಮೊದಲು ಗೆಳೆಯ ಕೇಳಿದ;
ಚಪ್ಪಲಿಯನ್ನು ಕಳಚಿಟ್ಟು ಬರಲೆ?
ಹೇಳಿದೆ:
ಗೆಳೆಯ ಕಾಲಿನಲ್ಲಿರುವ ಚಪ್ಪಲಿ
ಹಾಗೇ ಇರಲಿ
ನೀನು ಬಳಸಿ ಸವೆದು ಹೋಗಿರುವ
ನಿನ್ನ ಹೆಸರನ್ನು ಕಳಚಿ ಒಳಗೆ ಬಾ...

ಗೆಳೆಯಾ,
ತಪ್ಪು, ಹೆಸರನ್ನು ಹೊಲಿದ
ಚಮ್ಮಾರನದ್ದಲ್ಲ
ಅದನ್ನು ಧರಿಸಿ ನೀನು
ತುಳಿದ ದಾರಿಯದ್ದು

ನೀನು ಧರಿಸಿಕೊಂಡ
ಚಪ್ಪಲಿಯಲ್ಲಿ
ಅಂಟಿಕೊಂಡ ಧರ್ಮ, ಜಾತಿ
ವರ್ಗ, ಕುಲ, ಗೋತ್ರ...
ಇತ್ಯಾದಿ ಹೊಲಸುಗಳ ನೋಡು
ಒಳಗೆ ಬರುವುದಾದರೆ
ಕಳಚಿಟ್ಟು ಬಾ...
ಆ ನಿನ್ನ ಹೆಸರನ್ನ!

ಗೆಳೆಯಾ...
ಹೊಂಡ ಮುಚ್ಚುವಾಗ
ನೀನು ಧರಿಸಿದ್ದ
ಹೆಸರೆಂಬ ಚಪ್ಪಲಿಯನ್ನು
ಹರಿದು ಎಸೆದಿದ್ದಾರೆ ನೋಡು,
ಗುಜರಿ ಅಂಗಡಿಯ ತಕ್ಕಡಿಯಲ್ಲಿ
ತೂಗುತ್ತಿರುವ ನಿನ್ನ ಹೆಸರು
ಹತ್ತು ರೂಪಾಯಿಯಷ್ಟೂ
ಬೆಲೆ ಬಾಳುತ್ತಿಲ್ಲ!!

# ದೇಶ

ಅಂದು ಮುಂಜಾನೆ ಎದ್ದು ನೋಡುತ್ತೇನೆ...
ಭಾರತ ಕಾಣೆಯಾಗಿದೆ
ಎಲ್ಲಿ ಹೋಯಿತು?
ಮಲಗುವವರೆಗೂ
ತನ್ನ ತ್ರಿವರ್ಣ ಸೆರಗನ್ನು
ಹಾರಿಸುತ್ತ ಬಿಂಕ ಬಿನ್ನಾಣದಿಂದ ಇಲ್ಲೇ ಓಡಾಡುತ್ತಿತ್ತಲ್ಲ
ಎಂದು ಹಿತ್ತಲಿಗೆ ಬಂದರೆ...
ತೆರೆದ ಮಲದ ಗುಂಡಿಯಲ್ಲಿ
ನನ್ನ ದೇಶದ ಹೆಣ ತೇಲುತ್ತಿತ್ತು!

*(ಕೋಲಾರದಲ್ಲಿ ಇಬ್ಬರು ದಲಿತರು ಮಲದ ಗುಂಡಿಗೆ ಬಿದ್ದು ಮರಣವಪ್ಪಿದ ಸುದ್ದಿ ಕೇಳಿ ಬರೆದ ಕವಿತೆ)*

# ಅನಾಥ ಸಾಲುಗಳು...

ಅಪರಿಚಿತ ಓಣಿಯಲ್ಲಿ
ತಡವರಿಸುವ
ಎಳೆ ಕಂಬನಿಯಂತಿರುವ
ಆ ನಾಕು ಸಾಲುಗಳನ್ನು ಬರೆದೆ
ಕವಿತೆಯೆಂದು ಕರೆದೆ
ಅವರು ನಕ್ಕರೂ...

ನನಗೆ ಗೊತ್ತಿದೆ...
ಆ ಸಾಲುಗಳು
ಅನಾಥ–
ನನ್ನ ಸಾವಿನ ಬಳಿಕ
ಕೊಳೆಯಗೊಡುವುದಿಲ್ಲ
ನಾಕು ಕಡೆ ಹೆಗಲು ಕೊಟ್ಟು
ಮಸಣ ಮುಟ್ಟುವ ತನಕ

# ಸಂಜೆಯ ಹೆಗಲಲ್ಲಿ ಹೆಣ

ನಿನ್ನೆ ಕತ್ತಲ ಶಿಲುಬೆಯಲ್ಲಿ
ತೂಗುತ್ತಿದ್ದವರು ಇದೀಗ
ರಕ್ತ ಸಿಕ್ತ ಮೂಡಣದಿಂದ
ಎದ್ದು ಬಂದರು!

ಉಂಡ ಎಲೆಯಿಂದ ಬೇರ್ಪಡುವಂತೆ
ಅವರು ಪರಸ್ಪರ ಕಳಚಿಕೊಂಡರು
ಅವನ ಮುಷ್ಟಿಯಿಂದ
ಮೊಲೆಯನ್ನು ಬಿಡಿಸಿಕೊಂಡ ಅವಳು
ಕಳಚಿಟ್ಟ ಇಸ್ತ್ರಿ ಪೆಟ್ಟಿಗೆ ತುಂಬಾ
ಮತ್ತೆ ಸುರಿವಳು ಕೆಂಡ

ಅಡುಗೆ ಮನೆಯಲ್ಲಿ
ಟಿಫಿನ್‌ಬಾಕ್ಸ್‌ಗಳು ಬಾಯಿತೆರೆದು
ಪಿಸುಗುಟ್ಟತೊಡಗಿದವು...
ಅತ್ತಿಂದಿತ್ತ ಚಲಿಸತೊಡಗಿದವು
ಮಹಾ ಸಾಗರದ ದಿಕ್ಸೂಚಿಯಂತೆ
ಗಡಿ–
ಯಾರ ಮುಳ್ಳುಗಳು!

ಬಿದ್ದ ಮೌನದ ಬೀಗಕ್ಕೆ
ಇಬ್ಬರಲ್ಲೂ ನಕಲಿ ಕೀಗಳು

ಫ್ರಿಜ್ಜಿನಲ್ಲಿಟ್ಟ ತರಕಾರಿಯಂತೆ
ಅಕ್ಕಪಕ್ಕ ಕುಳಿತ ಕಣ್ಣುಗಳು
ಚಲಿಸುತ್ತಿರುವುದಾದರೂ ಏನು?
ಬದುಕೋ, ರೈಲಿನ ಚಕ್ರವೋ,
ಬಂಡಿಯೋ, ಹಳಿಯೋ...
ತಿಳಿದುಕೊಳ್ಳಲಾರದವರಂತೆ
ಈ ನಿಲ್ದಾಣದಲ್ಲಿ ಅವಳು
ಮತ್ತು ಅಲ್ಲಿ ಅವನು...

ಅದೋ ಕುದುರೆಯ ಖುರಪುಟ ಸದ್ದು
ಧಾವಿಸಿ ಬರುವ ಸಂಜೆ
ಹೆಗಲಲ್ಲಿ ಹೆಣ
ನಿಮ್ಮ ನಿಮ್ಮ ಕತೆಗಳು ಜೋಪಾನ
ಮುರಿಯಲಿ ವಿಕ್ರಮಾದಿತ್ಯನ ಮೌನ
ಸಾಗುತಿರಲಿ ಹೀಗೇ ಪಯಣ....

# ಹನಿ ಕವಿತೆಗಳು

1

**ಅಮ್ಮ**

ಗುಲಾಬಿಯೆಂದರೆ
ಅಮ್ಮನಿಗೆ ಇಷ್ಟ
ಗೊತ್ತು ಅವಳಿಗೆ ಮುಳ್ಳಲ್ಲಿ
ಅರಳುವ ಕಷ್ಟ!

2

**ರಜಾ**

ನನ್ನೆದುರಲ್ಲೇ ಮಿಲಿಟರಿ ವ್ಯಾನೊಂದು
ಸರಿದು ಹೋದದ್ದು
ಪುಟ್ಟ ಮಗು ಅದರೆಡೆಗೆ ಕೈ ಬೀಸಿ
'ಟಾ..ಟಾ..' ಎಂದದ್ದು
ಬಾಗಿಲ ಪಕ್ಕ
ಕುಳಿತ ಯೋಧನೊಬ್ಬ
ಅದನ್ನು ಸ್ವೀಕರಿಸಿದ್ದು
ಒಂದೇ ಕ್ಷಣಕ್ಕೆ ನಡೆದು ಹೋಯಿತು!

ಇನ್ನು ಯುದ್ಧಕ್ಕೆ ರಜಾ!

3

**ಗೆಳತಿ**

ಗಲ್ಲಿಗೇರಿಸುವ ಮುನ್ನ
ಮುಚ್ಚುತ್ತಾರೆ ಮುಖ
ಇದು ಬುರ್ಖಾದ ಬಗ್ಗೆ
ನನ್ನ ಗೆಳತಿಯ ತರ್ಕ

4

**ಪರಿಮಳ**

ಮೀನು ಮಾರುವವಳು ನನ್ನ ನಲ್ಲೆ
ಈಗಷ್ಟೇ ಬಂದು ಹೋದಳು
ಕೋಣೆಗೆ
ಎಲ್ಲರೂ ಮೂಗು ಮುಚ್ಚಿದರು
ನನಗೆ ಮಾತ್ರ ಯಾಕೋ...
ಕೋಣೆ ತುಂಬಾ ಮಲ್ಲಿಗೆ

5

**ಪಾವತಿ**

ಗುಲಾಬಿ ಮತ್ತು ಕವಿತೆ ಜತೆ
ಬರುತ್ತಿದ್ದೇನೆ
ಧಾರಾವಿಯ ಕಪ್ಪು ಬೆಳಕಿನ ದಾರಿ ಒಡೆದು
ಎದ್ದು ಬಂದ ಪುಟ್ಟ ಮಗು
ಗುಲಾಬಿಯನ್ನು ಕೈ ಮಾಡಿ ಕರೆಯಿತು
ನನ್ನ ಕವಿತೆ ಗುಲಾಬಿಯ ಜೊತೆ
ಮಗುವಿನ ಕಣ್ಣಲ್ಲಿ
ಇಂಗಿ ಹೋಯಿತು

ಪಡೆದ ಸಾಲ ಮರಳಿದಂತೆ

6

**ತಾಯಿ**

ಅವಳ ಮಡಿಲಲ್ಲಿ ಮುಳುಗೇಳುತ್ತಿದ್ದ ಮಗು
ಪಕ್ಕನೆ ಅವಳ ಮುಖ ಪರಚಿ ಬಿಟ್ಟಿತು
ಆ ಗಾಯವನ್ನು ಆರದಂತೆ
ಜೋಪಾನ ಇಟ್ಟು
ನರಳುತ್ತಾಳೆ ತಾಯಿ

ಇಂದಿಗೂ ಸುಖದಿಂದ!

# ಕೈದಿ

ಕೈದಿಯೊಬ್ಬ ಸೂರ್ಯನ
ಬೆಳಕನ್ನು ಅರಸುತ್ತಾ
ಸೆರೆಮನೆಗೆ ಕನ್ನ ಕೊರೆಯುವಂತೆ

ನಾನು ಕವಿತೆ ಬರೆಯುತ್ತೇನೆ!

ಧರಿಸಿದ ಸರಪಳಿಗಳು, ಕೈಕೋಳಗಳನ್ನು
ರೂಪಕಗಳಂತೆ ಬಳಸಿ
ನನ್ನ ಕವಿತೆಗಳನ್ನು
ಶೃಂಗರಿಸುತ್ತೇನೆ!

# ಅನಿ ಮತ್ತು ದೇವರು!

ನೀನು ನನ್ನ ದೇವರೇ
ಯಾಕಾಗಬಾರದಿತ್ತು ಎಂದು
ಒಂದು ರಾತ್ರಿಯಿಡೀ ಅತ್ತು ಬಿಟ್ಟೆ!

ನನ್ನೆದೆಯಲ್ಲೊಂದು ಮಗು
ತಾಯ ಹಾಲಿಲ್ಲದೆ
ಬಾಯಾರಿ ಕಾಯುತ್ತಿತ್ತು
ಮಗುವೇ...ಎಂಬ ಕರೆಗೆ ತಲ್ಲಣಿಸಿದ
ಈ ಮಗುವಿನ ದುರಾಸೆಯನ್ನು
ಕ್ಷಮಿಸಿ ಬಿಡು

ಅಸಂಖ್ಯ ಹಗಲುಗಳನ್ನು ತೋಡಿ
ದಫನಗೈದ ನನ್ನ ದೇವರುಗಳನ್ನು ನೋಡು
ಸ್ಮಶಾನದಂತಿರುವ ಈ ಇರುಳಲ್ಲಿ
ನಿನ್ನ ಆ ಕರೆ
ಮಾತ್ರ ಆಸರೆ!

ಸದ್ದಡಗಿದ ನನ್ನ ಉಲ್ಲಾಸಗಳು
ಮೌನದ ತೆಕ್ಕೆಯಲ್ಲಿ
ಜೋಲಾಡುವ ಬಾವಲಿಗಳು

ಹಗಲ ಯಜಮಾನಿಕೆಯನ್ನು ತಿರಸ್ಕರಿಸಿ
ರಾತ್ರಿಯನ್ನು ತಬ್ಬಿಕೊಂಡ ಬಡಪಾಯಿಗಳು

ಇನ್ನೆಂದಾದರೊಮ್ಮೆ
ಬರಬಹುದಾದ ಆ ಕರೆಯ
ಅಕ್ಕರೆಗಾಗಿ ಈ ಇರುಳ
ಹೊದ್ದುಕೊಂಡು ಸಕಲ ಜಗತ್ತಿನ ಜತೆಗೆ
ಕಾಯುವೆ ಮಗುವೆ....

# ಬಲಿ ಹಬ್ಬದ ಬೆಳಗು

ಮಿನಾರದಿಂದ ಬಾಣದಂತೆ
ನೆಗೆದು ಬಂದ ಅಝಾನ್
ಇರುಳ ಎದೆಯನ್ನು ಸೀಳಿದ
ರಭಸಕ್ಕೆ ಎದ್ದು ಕೂತೆ!

ಇರುಳು ನರಳುವ ಸದ್ದಿಗೆ
ಮರ ಗಿಡಗಳು
ಮೌನವಾಗಿ ಅಳುತ್ತಿದ್ದವು
ಎಲೆಎಲೆಗಳಿಂದ ತೊಟ್ಟು
ಕಳಚುತ್ತಿದ್ದ ಕಂಬನಿ
ನನ್ನ ಎದೆಯ ಕೊಳವನ್ನು
ತುಂಬಿಕೊಳ್ಳುತ್ತಿದ್ದವು

ವುಝೂವಿಗೆ ಕೂತಿತ್ತು
ಆಗಷ್ಟೇ ಆಗಸ
ರಕ್ತದಿಂದ ನೆಂದ
ತನ್ನ ಕೈ, ಮೋರೆಗಳನ್ನು
ನೆಕ್ಕಿಕೊಳ್ಳುತ್ತಿತ್ತು

ಒಳಗೆ ಅಮ್ಮ

ಅವಳ ನಿಟ್ಟುಸಿರಂತೆ
ದೋಸೆ ಹುಯ್ಯುವ ಸದ್ದು

ಬಾಡಿ ಹೋದ ಬಳ್ಳಿಯಂತೆ
ಮುಚ್ಚಿದ ಕಂಬಳಿಯಿಂದ
ಹೊರ ಚಾಚಿದ ಅಂಗೈ
ಹಚ್ಚಿದ ಮದಿರಂಗಿ
ಗಾಯಗಳ ಚಿತ್ತಾರ ಬರೆದಿತ್ತು!

ಗೋಡೆಯ ಮೇಲೆ
ಹೊಸ ಬಟ್ಟೆ
ಹೆಣದಂತೆ ತೂಗುತ್ತಿತ್ತು!

ಎದ್ದು ನೇರ
ಹಿತ್ತಲಿಗೆ ಬಂದೆ
ಹಿಂಬಾಲಿಸಿದ ಅಪ್ಪನ ಕೆಮ್ಮು
ಬಿಕ್ಕಳಿಕೆಯಂತಿತ್ತು

ತಲೆ ಎತ್ತಿದರೆ...
ಹಿಮದ ತಣ್ಣಗಿನ
ಬಿಳುಪನ್ನು ಹೊದ್ದು ಆಗಸ
ಕರುಣಾಳುವಿಗೆ ಬಾಗಿದೆ!

ಸ್ನಾನದ ಮನೆಯಲ್ಲಿ
ಕುದಿವ ನೀರಿನ ಪರಿಮಳ
ಅರಳ ಹತ್ತಿದೆ!

ಮಿಂದೆ
ಹಬೆಯಾಡುವ ಮೈಯನ್ನು

ಒರೆಸುತ್ತಾ
ಅಣ್ಣನ ಕೋಣೆಯೊಳ ಇಣುಕಿದರೆ
ಎದೆಯೇ ಬಿರಿಯುವಂತೆ
ಮಂಚ ಬರಿದಾಗಿದೆ!

ಬೆಂಕಿ ಬಿದ್ದ
ತೈಲದ ಬಾವಿಯಂತೆ
ನನ್ನೆದೆ ಧಗಿಸುತ್ತಿದೆ!

# ಕ್ಷಮೆಗೆ ಕ್ಷಮೆಯಿಲ್ಲ

1

ದಾರಿ ತಪ್ಪಿದ ಅನಾಥ ಮಕ್ಕಳಂತೆ
ತಿಳಿದೋ ತಿಳಿಯದೆಯೋ ಮಾಡಿದ ಸಾವಿರ ತಪ್ಪುಗಳು!

ಕ್ಷಮೆಯೋ...
ಎದೆಯೊಳಗೆ ಕುದಿ ಕುದಿವ ಹಾಲಿಟ್ಟು
ಕಳೆದುಹೋದ ಮಕ್ಕಳಿಗೆ ತುಡಿವ
ತಾಯಿಯಂತೆ!

2

ರಕ್ತದ ಕಲೆಗಳ ಕುರುಹುಗಳೇ ಇಲ್ಲ
ಆದರೂ ಗಾಯಗೊಂಡು ಬಿದ್ದಿದ್ದಾರೆ ಇವರೆಲ್ಲ

ದಯೆಯ ಒರೆಯೊಳಗೆ
ಹೊಂಚಿ ಕೂತ ಕ್ಷಮೆಯೆಂಬ ನಿರ್ದಯಿ ಖಡ್ಗವೇ
ನಿನಗೆ ಸಾಟಿಯಿಲ್ಲ....

ನಿನ್ನ ತುಟಿಯಂಚಿನ ನಗುವಿನಲ್ಲಿ
ಹೊಳೆಯುತ್ತಿರುವ ಅಲಗು
ನಿಷ್ಪಾಪಿ ಪಾಪಿಗಳ ಹೃದಯವನ್ನೇ ಇರಿದಿದೆ

ಕ್ಷಮೆಗೆ ಕ್ಷಮೆಯಿಲ್ಲ!

3
ಅವನು ಮಾಡಿದ
ಸಾವಿರ ತಪ್ಪುಗಳ
ಒಂದು ಕ್ಷಮೆಯಿಂದ
ನಾನು ಸರಿ
ದೂಗಿಸಿಕೊಂಡೆ

4
ನಾನು
ಅವನ ದ್ವೇಷಿಸಿದೆ
ಅವನೋ ನನ್ನನ್ನು ಕ್ಷಮಿಸಿದ!

ಹೇಳು ದೇವರೆ...
ಯಾರು ಹೆಚ್ಚು ನೊಂದವರು?
ನಾನೋ...ಅವನೋ...?

5
ನನ್ನದೋ ತಿಳಿಯದೇ ಮಾಡಿದ ತಪ್ಪುಗಳು
ನೀನೋ ತಿಳಿದು
ತಿಳಿದೂ ನನ್ನನ್ನು ಕ್ಷಮಿಸಿದೆ
ಹೇಳು...
ಯಾರು ಯಾರಿಗಿಂತ ಹೆಚ್ಚು ದುಷ್ಟರು?

6
ಕ್ಷಮೆಯ ಹಂಗಿನ ಅರಮನೆಗಿಂತ
ನನ್ನ ದ್ವೇಷದ ಅರಗಿನ ಮನೆಯೇ
ಲೇಸು ಎಂದು
ನೆಮ್ಮದಿಯಿಂದ ಸುಟ್ಟು ಹೋದೆ!

# ಮೂರು ಬೆರಳುಗಳು!

ಅವನ ಮೂರು ಬೆರಳುಗಳ
ಭಾರವನ್ನು ಹೆಗಲಲ್ಲಿ ಹೊತ್ತು
ನಾನು ಮುಂಬೈಯ ದಾರಿ ಹಿಡಿದೆ

ಅಮ್ಮನ ಕಣ್ಣ ಹನಿಗಿಂತ,
ಅಪ್ಪನ ಸಿಟ್ಟಿಗಿಂತ,
ತಂಗಿಯರ ನಿಟ್ಟುಸಿರಿಗಿಂತ ಭಾರವಾದದ್ದು
ಇನ್ನೊಂದು ಇದೆ ಎನ್ನುವುದನ್ನು
ಅರಿತ ದಿನ ಅದು!

ಹಗಲಿನ್ನೂ ತೆರೆಯದ ಹೊತ್ತು
ಎಣ್ಣೆ ಮುಗಿದಿದ್ದ ಚಿಮಿಣಿ ದೀಪ
ಇನ್ನೂ ಆ ಕ್ಷಣದ ಯಾಜಮಾನ್ಯಕ್ಕಾಗಿ ಒದ್ದಾಡುತ್ತಿತ್ತು
ಇನ್ನೊಬ್ಬರ ಮುಖದರ್ಶನಕ್ಕೆ
ಅವಕಾಶ ಕೊಡದ ಆ ಕತ್ತಲೇ
ನಮ್ಮನ್ನೆಲ್ಲ ರಕ್ಷಿಸಿತ್ತು!

ಏನನ್ನಿಸಿತೋ,
'ತಮ್ಮನನ್ನು ಬಸ್ಸಿನವರೆಗೆ
ಬಿಟ್ಟು ಬರುವೆ' ಅಂದ
ಬೇಡ ಅನ್ನಲಿಲ್ಲ ನಾನೂ

ದಾರಿ ಅರ್ಧ ಮುಗಿದರೂ
ಮಾತಾಡಿರಲಿಲ್ಲ ಇಬ್ಬರೂ
ಮಂಜುಗತ್ತಲಲ್ಲಿ
ಎಡವುತ್ತಾ ಸಾಗುತ್ತಿದ್ದರೂ
ಪರಸ್ಪರ ಕೈ ಚಾಚಲಿಲ್ಲ
ಒಬ್ಬರನ್ನೊಬ್ಬರು ಆಧರಿಸಿ ನಿಲ್ಲಲಿಲ್ಲ
ನಾನೇ ಹೊತ್ತ ನನ್ನ ಭಾರವನ್ನು
ಕಣ್ಣು ತಪ್ಪಿಸಿ ನೋಡಿ,
ಪಕ್ಕನೆ ತಲೆತಗ್ಗಿಸುತ್ತಿದ್ದ!

ಈಗಲೂ ನೆನಪಿದೆ ನನಗೆ
ಕೆನ್ನೆಯ ಮೇಲೆ ಉದುರಿದ
ಆ ಮೊದಲ ಹನಿ!
'ಓ ಮಳೆ...!' ಎಂದೆ
'ಹೌದು...ಮಳೆ...' ಎಂದ
ಆಕಾಶ–ಭೂಮಿ ಇದ್ದಕ್ಕಿದ್ದಂತೆಯೇ ಒಂದಾಯಿತು
ಬಿಡಿಸಿದ ನನ್ನ ಛತ್ರಿಯೊಳಗೆ
ಸೇರಿಕೊಂಡ...
ಎರಡು ಮರೂಭೂಮಿಗಳು ಒಂದಾಗುವಂತೆ
ಪರಸ್ಪರ ಹತ್ತಿರವಾದೆವು

ಆಧಾರಕ್ಕೆಂದು ಒಂದು ಕೈಯನ್ನು ನನ್ನ ಹೆಗಲ ಮೇಲಿಟ್ಟ
ಅವನದೆಷ್ಟು ಜಿಪುಣನಾಗಿದ್ದ!?
ಮೂರು ಬೆರಳುಗಳನ್ನಷ್ಟೇ ಎಣಿಸಿ ಇಟ್ಟಿದ್ದ!
ಹೂವಿನ ಎಸಳಿನಂತಹ
ಆ ಮೂರು ಬೆರಳುಗಳು
ಅದೆಷ್ಟು ಭಾರವಾಗಿದ್ದವು!

ಬಸ್ಸು ಇನ್ನೇನೂ ಹೊರಡಬೇಕು
ಎನ್ನುವಷ್ಟರಲ್ಲಿ ತನ್ನ ಜೇಬಿನಿಂದ

ಲಕೋಟೆಯೊಂದ ತೆಗೆದ
'ಬಂಧು, ಮಿತ್ರರಿಲ್ಲದ ಊರಿಗೆ
ಹೋಗುತ್ತಿದ್ದೀಯ.
ಕೊಲಾಬದಲ್ಲೊಬ್ಬ ನನ್ನ ಗೆಳೆಯನಿದ್ದಾನೆ
ನಿನ್ನ ಕುರಿತು ಈ ಪತ್ರದಲ್ಲಿ ಬರೆದಿದ್ದೇನೆ
ಅವನಿಗೆ ತೋರಿಸು' ಎಣಿಸಿ ಎಣಿಸಿ ನುಡಿದ!

ಭದ್ರವಾಗಿ ಮುಚ್ಚಿದ್ದ
ಲಕೋಟೆ,
ಅವನಿಂದ ಇಸಿದುಕೊಳ್ಳುವಾಗ
ಈಗಲೂ ನೆನಪಿದೆ ನನಗೆ,
ತಪ್ಪಿಯೂ ಬೆರಳುಗಳು ಸ್ಪರ್ಶಿಸಿರಲಿಲ್ಲ!

ಬಸ್ಸು ಎಲ್ಲಿ ತಲುಪಬೇಕಿತ್ತೋ ಅಲ್ಲಿಗೆ ತಲುಪಲಿಲ್ಲ
ದಾರಿ ತಪ್ಪಿದೆ
ಮನುಷ್ಯನ ನರ ನಾಡಿಗಳಂತಿದ್ದ
ಆ ಗಲ್ಲಿಗಲ್ಲಿಗಳಲ್ಲಿ ಅಲೆದೆ
ಅವನ ಗೆಳೆಯನಿಗಾಗಿ
ಕೈಯಲ್ಲಿ ಭದ್ರವಾಗಿದ್ದ ಲಕೋಟೆ
ಕಳೆದುಹೋಗುವವರೆಗೂ...

ಓ ದೇವರೆ...
ಈಗ ಹೊಳೆಯುತ್ತಿದೆ ನನಗೆ
ಒಂದೊಮ್ಮೆ ಅದು ನನಗೇ ಎಂದು ಕೊಟ್ಟ
ಲಕೋಟೆಯಾಗಿದ್ದಿರಲೂ ಬಹುದಿತ್ತು
ಕಳೆದು ಹೋಗುವ ಮೊದಲು
ಆ ಲಕೋಟೆಯನ್ನು ಒಡೆದು
ನಾನು ಓದಬೇಕಾಗಿತ್ತು...

# ಸ್ನೇಹ

ನಿನ್ನ ಕಂಡಾಗಲೆಲ್ಲ
ದ್ವೇಷಿಸಬೇಕೆಂದು
ಅನ್ನಿಸುತ್ತದೆ

ದ್ವೇಷಕ್ಕೂ ಹೀಗೊಂದು
ಸ್ನೇಹದ ಮುಖ ಇದೆ
ಎಂದು ತಿಳಿದಿರಲಿಲ್ಲ ನನಗೆ!

ದೇವರಾಣೆ
ಮೂರು ಕಾಸಿನ ಲಾಭವಿಲ್ಲದ
ನಿನ್ನ ಸ್ನೇಹದಿಂದ ಬಿಡಿಸಿಕೊಳ್ಳಲು ಅದೆಷ್ಟೋ
ಪ್ರಯತ್ನ ಮಾಡಿದ್ದೇನೆ

ಲಾಭವಿಲ್ಲ
ಎನ್ನುವ ಒಂದೇ ಒಂದು
ಕಾರಣಕ್ಕೆ
ಈ ಸ್ನೇಹ ಉಳಿದುಕೊಂಡಿದೆ

# ಕೊಳಲು

ಅವನಿಂದ
ಕೊಂಡ ಕೊಳಲಿಗೆ
ತುಟಿ ಸೇರಿಸಿದೆ
ದನಿಯೇ ಇಲ್ಲ

ಕೊಳಲನ್ನು ಮಾತ್ರ ಕೊಳ್ಳುವ
ನನ್ನ ಹಣ
ಅವನ ಧ್ವನಿಯ ಕೊಳ್ಳಲಾಗದ
ಅವಮಾನದಿಂದ ತಲೆತಗ್ಗಿಸಿತು!

# ಭಾಗ್ಯರೇಖೆ

ಮದಿರಂಗಿ ಹಚ್ಚಿದ
ಅವನ ಬೊಗಸೆಯಿಂದ
ಬಿಡಿಸಿಕೊಂಡ ನನ್ನ ರಕ್ತಸಿಕ್ತ ಕೈಗಳು!

ಮದುವೆಯ ಚಪ್ಪರದಿಂದ
ಕಣ್ಣೀರಿನಂತೆ ಇಳಿಯುತ್ತಿದ್ದ
ಮಳೆ ನೀರಿನಲ್ಲಿ ತೊಳೆದುಕೊಂಡೆ
ಓ ದೇವರೇ...
ನನ್ನ ಅಂಗೈಯ ಭಾಗ್ಯರೇಖೆ?

ಅವನ ಬೊಗಸೆಯೊಳಗೇ ಉಳಿದು ಬಿಟ್ಟಿದೆ!

# ಹೆಸರಿಲ್ಲದ ದೇವರಲ್ಲಿ ಹೆಸರಿಲ್ಲದ ನಾನು...

ನಿನಗಾಗಿ ಸಲ್ಲಿಸಿದ ನನ್ನ ಪ್ರಾರ್ಥನೆ
ರಕ್ತದಲ್ಲಿ ಅದ್ದಿ ತೆಗೆದ ಉದ್ಗಾರದಂತಿದೆ
ಯಾರದೋ ಕಣ್ಣ ಹನಿಗಳನ್ನು
ಜಪಮಣಿಗಳಂತೆ ಎಣಿಸುತಿರುವೆ

ನಿನಗೆ ತಲೆ ಬಾಗಿ ಹೊರ ಬಂದ ನನ್ನೊಳಗೆ
ಒಂಟಿ ಹೆಣ್ಣೊಬ್ಬಳನ್ನು
ಸಾವಿರ ಸಹಭಾಗಿಗಳೊಂದಿಗೆ
ತಿಂದು ಮುಗಿಸಿದ ನರಭಕ್ಷಕನ ತೇಗು...

ವಿಗ್ರಹಗಳನ್ನು ಕೆತ್ತಿದ ಆಯುಧಗಳು
ಮಿನಾರಗಳನ್ನು ನಿಲ್ಲಿಸಿದ
ಹಾರೆ ಗುದ್ದಲಿಗಳು
ಧರ್ಮದ ಬಾಗಿಲಲ್ಲಿ ನಿಂತು
ಪಹರೆ ಕಾಯುತ್ತಿವೆ

ಧರ್ಮವೆನ್ನುವ ಕಳಂಕ
ಕಿತ್ತು ತೆಗೆದಂತೆಯೇ
ನನ್ನನ್ನು ಚರ್ಮದಂತೆ
ಅಂಟಿಕೊಳ್ಳುತ್ತಿದೆ

ಹೆಸರಿಲ್ಲದೆ ಬಾಳಬಹುದೆಂಬ
ಕನಸು ಕಂಡಿದ್ದ
ನನ್ನ ಮಗು ಮನಸ್ಸು
ಹೆಸರಿನ
ಶಿಲುಬೆ ಹೊತ್ತು ತಿರುಗುತ್ತಿದೆ

ದೇವರೇ...ಇನ್ನು ಮುಂದೆ
ಹೆಸರಿರುವ ಎಲ್ಲ ತಾಯಂದಿರು ಬಂಜೆಯರಾಗಲಿ
ಕೊಡುವುದಾದರೆ
ಕಸದ ತೊಟ್ಟಿಗಳಿಗೆ, ಗಟಾರಗಳಿಗೆ, ಬಸ್‌ನಿಲ್ದಾಣಗಳಿಗೆ
ಹೆರಿಗೆ ಬೇನೆ ಕೊಡು
ಧರ್ಮದ ಕಳಂಕವಿಲ್ಲದ
ಒಂದು ಮಗು
ಹೆಸರಿನ ಹಂಗಿಲ್ಲದೆ ಬಾಳಲಿ

*(ಗುಜರಾತ್ ಗಲಭೆಯ ಸಂದರ್ಭದಲ್ಲಿ ಬರೆದಿದ್ದೋದು)*

# ಹೌದು, ನಿಮ್ಮ ಅನುಮಾನ ಸರಿ!

ವಿನಾಶ ಕಾದಿದೆ ಆ ನಮಾಝ್ ನಿರ್ವಹಿಸುವವರಿಗೆ
ಅವರು ತೋರಿಕೆಯ ಕೆಲಸ ಮಾಡುತ್ತಾರೆ ಮತ್ತು
ಬಡವರಿಗೆ ಊಟ ಕೊಡಲು, ಜನರಿಗೆ ಆವಶ್ಯಕ ವಸ್ತು
ಕೊಡಲು ಹಿಂದೇಟು ಹಾಕುತ್ತಾರೆ
–ಕುರ್‌ಆನ್('ಅಲ್‌ಮಾಊನ್' ಅಧ್ಯಾಯ)

ನಮಾಝಿಗೆಂದು ಮಸೀದಿಯೆಡೆಗೆ
ಧಾವಿಸುತ್ತಿರುವವರು ನನ್ನನ್ನು ಕೈ ಬೀಸಿ ಕರೆಯುತ್ತಿದ್ದಾರೆ
ದೇವರನ್ನು ಮುಖಾಮುಖಿಯಾಗುವ ಧೈರ್ಯ ಸಾಲದೆ
ನಾನು ಅವಮಾನದಿಂದ ಮುಖ ಮುಚ್ಚಿಕೊಂಡಿದ್ದೇನೆ

ಹಸಿದ ಮಗುವೊಂದು ನನ್ನ
ಕಣ್ಣ ಆಳವನ್ನು ಕಲಕಿದೆ;
ತನ್ನ ದೃಷ್ಟಿಯ ಗರುಡ ಪಾತಾಳವನ್ನಿಳಿಸಿ...
ಅಯ್ಯೋ...ಈಗಷ್ಟೇ ಉಂಡು ಬಂದೆ
ತಲೆ ತಗ್ಗಿಸಿದ್ದೇನೆ ಅದರ ಮುಂದೆ!

ಆ ಮಗುವನ್ನು ಮರೆತು
ಉಂಡ ಅನ್ನದ ತುತ್ತು

ನನ್ನ ರಕ್ತದ ಕಣಕಣಗಳನ್ನೂ ಕಳಂಕಗೊಳಿಸಿದೆ
ಈ ಅಶುದ್ಧಿಯನ್ನು ತೊಳೆಯುವಷ್ಟು ನೀರು
ಮಸೀದಿಯ ಕೊಳದಲ್ಲಿದೆಯೆ?

ಏಕದೇವನ ಮುಂದೆ
ಪಾಲುದಾರಿಕೆಯನ್ನು ಬೇಡುತ್ತಿರುವ
ಶಬ್ದ, ಅಕ್ಷರಗಳ ವಿಗ್ರಹಗಳನ್ನು
ಮುರಿದು ಮುಂದೆ ಹೋಗಬೇಕಾಗಿದೆ
ಅದು ನನ್ನಿಂದ ಸಾಧ್ಯವಿದೆಯೆ?

ನನ್ನ ಮುಂದೆ ಸತ್ಯ ಧಗಧಗಿಸುತ್ತಿದೆ
ದೇವರೇ...ನಿನ್ನ ಪ್ರಾರ್ಥನೆಯ ಸಾಲುಗಳನ್ನು
ಮುರಿದು ಆ ಬೆಂಕಿಯ ಕುಲುಮೆಗಿಕ್ಕಿ
ಕರಗಿಸ ಹೊರಟಿದ್ದೇನೆ
ಸಾಧ್ಯವಾದರೆ ಆ ಅಗ್ನಿಧಾರೆಯನ್ನು ನೇಗಿಲುಗಳಾಗಿಸಿ
ನನ್ನ ಮರುಭೂಮಿಯಂತಹ ಎದೆಯನ್ನು ಉಳುತ್ತೇನೆ
ಸಬಲಗಳನ್ನಾಗಿಸಿ ನನ್ನೊಳಗಿನ ಬಂಡೆಯನ್ನು ಸೀಳುತ್ತೇನೆ
ಹನಿ ನೀರಿನೆಡೆಗೆ ದಾರಿ ಕೊರೆಯುತ್ತೇನೆ
...ಅಗತ್ಯ ಬಿದ್ದರೆ ಖಡ್ಗವನ್ನಾಗಿಸಿ
ಧರಿಸಿಕೊಳ್ಳುತ್ತೇನೆ
ಮತ್ತು ಅದನ್ನು ಮೊದಲು
ನನ್ನ ವಿರುದ್ಧವೇ ಬಳಸುತ್ತೇನೆ!

ಹೌದು, ನಿಮ್ಮ ಅನುಮಾನ ಸರಿ
ನಾನೊಬ್ಬ ಜಿಹಾದಿ...!
ಮೊದಲು ನನ್ನ ವಿರುದ್ಧ
ನೆನಪಿರಲಿ, ಗೆದ್ದರೆ...ನಿಮ್ಮ ವಿರುದ್ಧ!!

# ಧ್ಯಾನ

ನೀನು ಹೇಳುವುದೂ ಸರಿ
ಇದು ಪ್ರಾರ್ಥನೆಯ ಹೊತ್ತು
ಅವನನ್ನು ಎಬ್ಬಿಸಬೇಕು

ಆದರೆ
ಈಗಷ್ಟೇ ದೇಗುಲವೊಂದನ್ನು
ಕಟ್ಟಿ ಮುಗಿಸಿದ
ಅವನು ದಣಿದಿದ್ದಾನೆ

ನನ್ನ ಧ್ಯಾನ
ಅವನ ನಿದ್ದೆಯಿಂದ
ಸ್ಫೂರ್ತಿ ಪಡೆದಿದೆ
ಕೆಡಿಸಬೇಡ

# ಮೊಬೈಲ್ ಹಾಡು....!

ಮತ್ತೆ ಮೊಬೈಲ್ ಕಂಪಿಸುತ್ತಿದೆ...
ಇನ್‌ಬಾಕ್ಸ್ ತೆರೆದು ನೋಡಿದರೆ
ಅವನೇ...ನಗುತ್ತಿದ್ದಾನೆ!

'ಯಾರು?' ಎಂಬ ನನ್ನ
ಎರಡಕ್ಷರದ ಮೆಸೇಜಿಗೆ
'ಹುಡುಕು' ಎಂಬ ಮೂರಕ್ಷರದ
ರಿಪ್ಲೈ ಕಳುಹಿಸುತ್ತಾನೆ....
'ಸಾಯಿ' ಎಂದು ಕಳುಹಿಸಿದರೆ
'ಬದುಕು' ಎಂದು ಮರಳಿಸಿದ
ಸಿಟ್ಟಿನಿಂದ ಮೆಸೇಜನ್ನೆಲ್ಲ ಅಳಿಸಿದರೆ
ಎದೆಯೊಳಗೇ 'ಸೇವ್' ಆಗಿ ನಗುತ್ತಿದ್ದ
ಅಳಿಸಿದರೆ...ತುಂಬಿಕೊಳ್ಳುತ್ತಿದ್ದ!

ನಂಬರ್‌ಗೆ ಕರೆ ಮಾಡಿದರೆ
ಉತ್ತರವಿಲ್ಲ
ಯಾಕೆ ಈ ಪ್ರಯಾಸ ಎಂದು
ನೇರ ಸೆಂಟರಿಗೆ ನಡೆದು
ಸಂಖ್ಯೆ ತೋರಿಸಿದರೆ
ಅಲ್ಲೊಂದು ನಕಲಿ ವಿಳಾಸ!

ನಗಿಸುತ್ತಿದ್ದ
ಅಳಿಸುತ್ತಿದ್ದ
ಕಾಡುತ್ತಿದ್ದ
ಹಾಡುತ್ತಿದ್ದ
ಆಕಾಶದಷ್ಟು ದೂರದಲ್ಲಿದ್ದರೂ
ಕೊರಳ ನೀಳ ನರದಷ್ಟು ಹತ್ತಿರದಲ್ಲಿ
ನನ್ನ ನೋಡುತ್ತಿದ್ದ

ಯಾರಿರಬಹುದು?
ತೋರು ಬೆರಳು ಹಿಡಿದು ನಡೆಸಿದ
ನನ್ನ ತಂದೆಯೆ?
ಚಹಾ ಹೀರುತ್ತಾ ನನ್ನ ಮುಂದೆಯೇ
ತುಂಟ ನಗು ಬೀರುತ್ತಿರುವ ಒಲವೆ?
ಅಥವಾ...ಮಾತು ಬಿಟ್ಟ ಗೆಳೆಯ?
ನನ್ನ ಜನ್ಮಾಂತರದ ಶತ್ರು?
ಅಥವಾ..ನೀನೊಬ್ಬನೇ ಇಲ್ಲಿ ಸಾಯಿ ಎಂದು
ಸತ್ತು ಹೋದ ಅಣ್ಣ?
ಇನ್ನೂ ಹೆರಿಗೆ ನೋವಿನ ತೆರಿಗೆ
ಕಟ್ಟುತ್ತಿರುವ ಅಮ್ಮ?
ಅಥವಾ...
ಹುಟ್ಟಿಯೇ ಇಲ್ಲದ ನನ್ನ ಮುದ್ದಿನ ತಮ್ಮ!?

ಒಂದು ಹಿತವಾದ ಗಾಯದಂತಿರುವ ಈತ
ಬರೇ ಸಂಖ್ಯೆಯೇ ಆಗಿದ್ದರೆ
ಕಳೆದುಳಿದ ಬದುಕಿನ ಒಟ್ಟು ಮೊತ್ತದಿಂದ
ಅದನ್ನೂ ಕಳೆದು ಬಿಡುತ್ತಿದ್ದೆ
ಅಕ್ಷರವೇ ಆಗಿದ್ದರೆ
ಒಂದೇ ಏಟಿಗೆ ಒರೆಸಿ ಹಾಕಿ ಬಿಡುತ್ತಿದ್ದೆ

ಭಯವಾಗುತ್ತಿದೆ ನನಗೆ...
ಅವನ ಉಸಿರಾಟ ಕೇಳಿಸುತ್ತಿದೆ
ಪರಿಮಳ ನನ್ನನ್ನು ಆವರಿಸಿದೆ
ಅವನ ರುಚಿ, ಸ್ಪರ್ಶವೂ ದಕ್ಕುತ್ತಿದೆ
ಆದರೂ ದೃಷ್ಟಿಗೆ ಸಿಗುತ್ತಿಲ್ಲ....
ಯಾರಿರಬಹುದು ಇವನು?

ಹುಡುಕುತ್ತಾ ಹುಡುಕುತ್ತಾ
ಮೊಬೈಲ್ ಕರೆನ್ಸಿ ಕರಗುತ್ತಿದೆ
ರೀಚಾರ್ಜ್ ಮಾಡಲು ಕೈ ಬರಿದಾಗಿದೆ
ಕರೆನ್ಸಿ ಮುಗಿಯುವ ಮುನ್ನ
ನನ್ನ ಹುಡುಕಾಟ ಮುಗಿಯಬೇಕಿದೆ
ಭಯವಾಗುತ್ತಿದೆ...

ಅಗೋ..ಮತ್ತೆ ಮೊಬೈಲ್ ಕಂಪಿಸುತ್ತಿದೆ...!

# ನನ್ನಜ್ಜನಜ್ಜನಜ್ಜನ ಮತಾಂತರ ಪ್ರಸಂಗ

ನನ್ನಜ್ಜನಜ್ಜನಜ್ಜನನ್ನು ಖಡ್ಗದಿಂದ
ಮತಾಂತರಗೊಳಿಸಿದರು!

ನನ್ನಜ್ಜನಜ್ಜನಜ್ಜ ತನ್ನ ಕೇರಿಗೆ ಮಹಾರಾಜನಾಗಿದ್ದ
ಶ್ರೀಗಳು ಅವನ ತಲೆಗೆ ಹೇಲಿನ ಬುಟ್ಟಿಯ
ಕಿರೀಟವನ್ನಿಟ್ಟು ಪಟ್ಟಾಭಿಷೇಕ ಮಾಡಿದ್ದರು

ಸರ್ವಾಲಂಕಾರ ಭೂಷಿತನಾಗಿದ್ದ ನನ್ನಜ್ಜನಜ್ಜನಜ್ಜನ
ಕೈಕಾಲುಗಳನ್ನು ಪಳಪಳನೆ ಮಿಂಚುವ ಸರಪಳಿಗಳಿಂದ
ಅಲಂಕರಿಸಲಾಗಿತ್ತು
ಅವನ ಬೆಲೆಬಾಳುವ ಕೈಕಡಗಗಳನ್ನು ನೀವು
ನೋಡಬೇಕಾಗಿತ್ತು?
ಯಾವ ಸುತ್ತಿಗೆಯೂ ಭೇದಿಸಲರಿಯದ ಆ ಕೋಳಗಳು
ನನ್ನಜ್ಜನಜ್ಜನಜ್ಜನನ್ನು ಹಾವಿನಂತೆ ಸುತ್ತಿಕೊಂಡಿದ್ದರೆ
ಆತ ನಂಜುಂಡನಂತೆ ಕಣ್ಮುಚ್ಚಿ ಕುಣಿಯುತ್ತಿದ್ದನಂತೆ...

ರಾಜರಿಗೆ ರಾಜನಾಗಿದ್ದ ನನ್ನಜ್ಜನಜ್ಜನಜ್ಜನಿಗೆ
ಉಣ್ಣುವುದಕ್ಕೆ ಪ್ರತ್ಯೇಕ ತಟ್ಟೆ,

ಹರಡಿ ನಿಂತ ನೀಲ ಆಕಾಶದಂತಿರುವ
ವಿಶಾಲ ಎದೆಗೆ ಹೊದಿಸುವುದಾದರೂ ಹೇಗೆ ಬಟ್ಟೆ?

ಅವನಿಗೂ ಒಂದು ಸಮಸ್ಯೆಯಿತ್ತು
ಆನೆಯ ಸೊಂಡಿಲಿನಂತಹ ಆತನ ತೋಳು
ನಿಗುರಿ ನಿಲ್ಲುವ ಮಾಂಸಖಂಡಗಳು...
ಅವನ್ನೆಲ್ಲ ಕಷ್ಟದಿಂದ ಅದುಮಿಟ್ಟು
ಅವನು ನಡುಬಾಗಿ ನಿಂತರೆ
ಅದೆಂತಹ ನಯ...ವಿನಯ...ರಾಜಕಳೆ!
ತೂಗಿದಂತೆ ಬಾಳೆ...ಏಲಕ್ಕಿ ಬೆಳೆ!

ಆದರೂ ಅವನ ಮುಟ್ಟಲು ಅವರೆಲ್ಲರಿಗೂ ಭಯ
ಯಾಕೆಂದರೆ ರಾಜರ ರಾಜನಾದ ನನ್ನಜ್ಜನಜ್ಜನಜ್ಜನಿಗೆ
ಶ್ರೀಗಳು ನೀಡಿದ್ದರು ಅಭಯ!
ಇಂತಹ ಅವನನ್ನು ಖಡ್ಗದ ಮೊನೆಯಿಂದ
ಮತಾಂತರಗೊಳಿಸಿ ಬಿಟ್ಟರು!

ಅವರು ಎಲ್ಲಿಂದ ಬಂದರು?
ಹಿಮಾಲಯವನ್ನು ಕೊರೆದು ಬಂದರೋ...
ಅರಬೀ ಸಮುದ್ರದ ಅಲೆಗಳನ್ನು ಹೆಡೆಮುರಿ ಕಟ್ಟಿ ಬಂದರೋ...
ಅಥವಾ ಹಿಂದೂಸ್ತಾನವೆನ್ನುವ
ಭೂ ಖಂಡದ ತೊಡೆಯನ್ನು ತುಂಡರಿಸಿ ಬಂದರೋ
ಹರಡಿನಿಂತ ಮರುಭೂಮಿಯ ಎದೆಯನ್ನು ಸೀಳಿ ಬಂದರೋ?
ಅಂತೂ ಅವರು ನನ್ನಜ್ಜನಜ್ಜನಜ್ಜನ ಕೇರಿಯನ್ನೇ
ಹುಡುಕಿಕೊಂಡು ಬಂದರು...

ಅವರ ಖಡ್ಗದ ಒಂದೇ ಏಟಿಗೆ
ಆತನ ತಲೆಯ ಮೇಲೆ ರಾರಾಜಿಸುತ್ತಿದ್ದ
ಕಿರೀಟ ಮುರಿದು ಬಿತ್ತು
ಅವನ ಶೃಂಗರಿಸಿದ್ದ ಆಭರಣಗಳ ಕಡಿದೆಸೆದರು

ಒಂದೊಂದು ಬೀಸಿಗೆ ನಯ-ವಿನಯಗಳ
ರುಂಡಮುಂಡಗಳು ಬೇರ್ಪಟ್ಟವು
ತಲೆತಲಾಂತರಗಳಿಂದ ಅವನ ಆಸ್ತಿಯಾಗಿದ್ದ
ಆ ತಟ್ಟೆಯನ್ನೇ ಸೀಳಿದರು...
ಕಪ್ಪು ಮೋಡಗಳು ದಟ್ಟೈಸಿದ್ದ ಅವನ ವಿಶಾಲ ಎದೆಯ
ಮೇಲೆ
ಆ ಖಡ್ಗ ಕೋಲ್ಮಿಂಚಿನಂತೆ ಎರಗಿತು
ರಕ್ತ ಮಳೆಯಂತೆ ಭೋರ್ಗರೆಯಿತು

ನನ್ನಜ್ಜನಜ್ಜನಜ್ಜನದೋ ದೊಡ್ಡ ದಂಡು
ತಲೆ ತಲಾಂತರಗಳಿಂದ ಶ್ರೀಗಳ
ಉಪ್ಪುಂಡು ಹುರಿಗೊಂಡ ದೇಹ
ಅಷ್ಟು ಸುಲಭದಲ್ಲಿ ಸೋಲೊಪ್ಪುವವನಲ್ಲ ಆತ
ಗಂಗಾನದಿಯಂತೆ ಹರಿದವು ಕೇರಿ ತುಂಬಾ ರಕ್ತ

ಆತ ತನ್ನ ಮೌನದ ತಿಜೋರಿಯಲ್ಲಿ
ಮಾತುಗಳೆಂಬ ಮುತ್ತು ರತ್ನಗಳನ್ನು ಭದ್ರವಾಗಿಟ್ಟಿದ್ದ!
ಅದರ ಕೀಲಿಕೈಯನ್ನು ಜೋಪಾನವಾಗಿ
ಶ್ರೀಗಳ ಕೈಗೆ ಒಪ್ಪಿಸಿದ್ದ!
ಖಡ್ಗ ಹಿರಿದು ಬಂದವರೋ ಕ್ರೂರಿಗಳು
ಆ ತಿಜೋರಿಯನ್ನು ಒಡೆದರು
ಯಾವ ಶಬ್ದಗಳೂ ಒಳಸಾಗದಂತೆ ತಡೆದಿದ್ದ
ಕಿವಿ ತಮಟೆಯನ್ನು ಹರಿದರು!!

ಎಲ್ಲಕ್ಕಿಂತ ದೊಡ್ಡ ದುರಂತವೊಂದು ನಡೆದು ಹೋಯಿತು
ಅವರು ನನ್ನಜ್ಜನಜ್ಜನಜ್ಜನನ್ನು ಮುಟ್ಟಿ ಬಿಟ್ಟರು!
ನಾಡು-ಕೇರಿ ಒಂದಾಗಿ ಬಿಟ್ಟಿತ್ತು
ರಾಜಪದವಿಯ ಏರಿ ಕುಳಿತಿದ್ದ ಆತ
ಒಮ್ಮೆಲೆ ಬೀದಿಗೆ ಬಿದ್ದಿದ್ದ
ನನ್ನಜ್ಜನಜ್ಜನಜ್ಜ ಸಾಮಾನ್ಯ ಮನುಷ್ಯನಾಗಿ ಬಿಟ್ಟಿದ್ದ!

ಅಯ್ಯೋ! ಆತನನ್ನು ಖಡ್ಗದ ಮೊನೆಯಿಂದ
ಮನುಷ್ಯನಾಗಿ ಮತಾಂತರಗೊಳಿಸಿ ಬಿಟ್ಟರು!

ಆ ದುರಂತದ ನೆನಪಿಗಾಗಿ...
ಕೇರಿಯಲ್ಲಿ ಗಂಗಾನದಿಯಂತೆ ಹರಿಯುತ್ತಿದ್ದ
ರಕ್ತದಿಂದ ಆ ಖಡ್ಗವನ್ನು ಶುಚಿಗೊಳಿಸಿ
ನನ್ನಜ್ಜ ಜೋಪಾನವಾಗಿಟ್ಟುಕೊಂಡ
ತಲೆ ತಲಾಂತರಗಳಿಂದ ಬಂದ ಆ ಖಡ್ಗ
ಇದೀಗ ನನ್ನ ಪಿತ್ರಾರ್ಜಿತ ಆಸ್ತಿ
ಬೆನ್ನೆಲುಬಿನಂತೆ....
ಬೆನ್ನ ಹಿಂದೆ ಧರಿಸಿಕೊಂಡಿದ್ದೇನೆ

ಸುದ್ದಿ ಬಂದಿದೆ...
ಶ್ರೀಗಳು ಮತ್ತೆ
ನನ್ನಜ್ಜನಜ್ಜನಜ್ಜನ ಕಿರೀಟದೊಂದಿಗೆ
ನನ್ನ ಪಟ್ಟಾಭಿಷೇಕಕ್ಕೆ ಬರುತ್ತಿದ್ದಾರೆ...
ಕಳೆದುಕೊಂಡ ನನ್ನ ಕೇರಿಯನ್ನು ನನಗೆ
ಮರಳಿಸಲು ಬಯಸಿದ್ದಾರೆ...

ನನ್ನ ಬೆನ್ನೆಲುಬನ್ನು ಇಂದ್ರಾಯುಧದಂತೆ
ಧರಿಸಿಕೊಂಡು ಕಾಯುತ್ತಿದ್ದೇನೆ ನಾನು...
ಅವರ ಬರವಿಗಾಗಿ...!!

# ಅಮ್ಮನ ಕೊಳಲು

ಮೊನ್ನೆ ಕೊಳಲು ವಾದನ
ಕಾರ್ಯಕ್ರಮಕ್ಕೆ ಹೋಗಿದ್ದೆ....
ತನ್ನ ಉಸಿರಿಂದ ನಾದವನ್ನು
ಹೊರಹೊಮ್ಮಿಸುವ ಆತನ
ಯತ್ನವ ಕಂಡು
ನನಗೆ ನನ್ನ ತಾಯಿಯ ನೆನಪಾಯಿತು

ಅಡುಗೆ ಮನೆಯ ಒಲೆಯ ಮುಂದೆ
ಈ ಬಿದಿರಿನ ಕೊಳವೆಯಂತಹದೆ
ಕಬ್ಬಿಣದ ಕೊಳವೆಯನ್ನು
ಆಕೆ ತುಟಿ ಸೇರಿಸಿ ಊದುತ್ತಿದ್ದರೆ
ನಾದವೊಂದು ಹೊರಹೊಮ್ಮುತಿತ್ತು
ಆಕೆಯ ಬೆನ್ನಿಗೆ ಆತುಕೊಂಡು
ನಾನದನ್ನು ಸವಿಯುತ್ತಿದ್ದೆ

ಮಲಗಿದ ಹಾವು ಥಕ್ಕನೆ
ಹೆಡೆ ಬಿಚ್ಚಿದಂತೆ
ಆ ನಾದಕ್ಕೆ ಹಸಿಸೌದೆ
ಧಗ್ಗನೆ ಹೊತ್ತಿಕೊಳ್ಳುತ್ತಿತ್ತು

ಕಬ್ಬಿಣದ ಕೊಳಲ ಊದಿ
ನನ್ನೆದೆಯಲ್ಲಿ ಬೆಂಕಿ ಹಚ್ಚಿದ
ನನ್ನಮ್ಮನ ನೆನಪಿನ ನಾದದ ಮುಂದೆ
ಈ ವಿದ್ವಾಂಸನ ಕೊಳಲು
ಹಸಿ ಸೌದೆ

# ರಾವಣಾಯನ

1
ಮೂಗು, ಕಿವಿ, ಹೃದಯ
ಹರಿದುಕೊಂಡು
ಆಕ್ರಂದನವಿಡುತ್ತಿದ್ದ
ವಿಧವೆ ಶೂರ್ಪನಖಿಯ
ನೋಡಿ ನಕ್ಕಳು ಸೀತೆ

ಅದಕ್ಕಾಗಿ ತೆತ್ತ ಬೆಲೆ
ರಾಮಾಯಣ!

2
ಯಾರು ಹೇಳಿದರು
ರಾಮಾಯಣ ಹುಟ್ಟಿದ್ದು
ವಾಲ್ಮೀಕಿಯ 'ಮಾನಿಷಾದ'
ದೊಂದಿಗೆ ಎಂದು...?

ರಾಮಾಯಣ ಹುಟ್ಟಿದ್ದು
ಶೂರ್ಪನಖಿಯ 'ಅಣ್ಣಾ...'
ಎಂಬ ವಿಷಾದ
ದೊಂದಿಗೆ

ಶೂರ್ಪನಖಿಯ ಶೋಕ
ರಾಮಾಯಣದ ಶ್ಲೋಕವಾಯಿತು

3
'ಅಣ್ಣಾ...' ಎಂಬ ಆಕ್ರಂದನಕ್ಕೆ
ರಾವಣ ಧಾವಿಸಿದ
ಕಿವಿ, ಮೂಗು, ಮುಖ ಕಳೆದುಕೊಂಡ
ತಂಗಿಯ ಕಣ್ಣಲ್ಲಿ ಕಣ್ಣೀರಿನಂತೆ ರಕ್ತ!

'ಇದೇನಿದು ಬಂಗಾರ...'
ರಾವಣ ಮಡಿಲಲ್ಲಿಟ್ಟು ಕೇಳಿದ
'ನಾಡಿನಿಂದ ಬಂದವರು
ಈ ಸ್ಥಿತಿಗೆ ತಂದರು'
ಶೂರ್ಪನಖಿ ಗಳಗಳನೆ ಅತ್ತಳು
"ನೀನೇನು ತಪ್ಪು ಮಾಡಿದೆ"
"ನಾನವರ ಇಷ್ಟ ಪಟ್ಟೆ"

ಅಷ್ಟೇ...
ಮುಂದೆ ರಾಮಾಯಣ ನಡೆಯಿತು
ತಂಗಿಗಾಗಿ ಪ್ರಾಣ ಕೊಟ್ಟ
ಅಣ್ಣನ ಕತೆ
ಜನಮನದಲ್ಲಿ ಹಾಡಾಯಿತು....!!

# ಎರಡು ಮಂಚಗಳು

ಮದುವೆಯೆಂದರೆ
ಎರಡು ಮಂಚಗಳನ್ನು
ಒಂದಾಗಿ ಜೋಡಿಸುವುದೆ?

ಯಾವ ಮರದ ಹಲಗೆಯೋ,
ಯಾವ ಬಡಿಗ ಕೆತ್ತಿದ ಕಾಲೋ
ಮದುವೆಯ ರಾತ್ರಿ
ಎರಡು ಮಂಚಗಳನ್ನು
ತಂದು ಜೋಡಿಸಿದ್ದಾರೆ!

ಹೊದಿಸಿದ್ದಾರೆ ಹಾಸಿಗೆಯನ್ನು
ನೀಳ ಗಾಯವೊಂದಕ್ಕೆ
ಬಿಳಿ ಬಟ್ಟೆಯೊಂದನ್ನು
ಬಿಗಿದು ಕಟ್ಟುವಂತೆ

ಅದೆಷ್ಟೋ ರಾತ್ರಿಗಳು
ಉರುಳಿವೆ
ಹಾಸಿಗೆ ಎತ್ತಿ ನೋಡಿದರೆ
ಗಾಯವಿನ್ನೂ
ತೆರೆದೇ ಇದೆ...!

# ಕಳೆದು ಹೋದ ಬಾಲ್ಯ....

ಕಟ್ಟಕಡೆಗೆ ನ್ಯಾಯಾಲಯ ಹೇಳಿತು
"ಅಗೆಯಿರಿ"

ದೇವಾಲಯವೊಂದನ್ನು ಹುಡುಕುತ್ತಾ
ಮಸೀದಿಯ ಅಗೆದರು
ಮಸೀದಿಯ ಹುಡುಕುತ್ತಾ
ದೇವಾಲಯವ ಬಗೆದರು

ಅಗೆದಂತೆ ಅವರಿಗೆ
ಓಣಿಯೊಂದು ತೆರೆಯಿತು

ಇಬ್ಬದಿಯಲ್ಲೂ ಸುಟ್ಟು ಹೋದ ಕಾಡು
ನಡೆದಂತೆ ಮುಂದೆ...
ಮುರಿದು ಬಿದ್ದ ಒಂದು ನಾಡು!
ಆ ಪಾಳು ನಗರದಲ್ಲಿ
ಅಶಾಂತ ಆತ್ಮಗಳ ಊಳು
ಅರೆ! ಭೂತವನ್ನು ಅಗೆಯುತ್ತಾ
ಭವಿಷ್ಯವನ್ನು ತಲುಪುತ್ತಿದ್ದೇವೆಯೋ
ಯಾರೋ ಅನುಮಾನಪಟ್ಟರು!

ಅಗೆಯುತ್ತಾ ಹೋದವರು
ಥಟ್ಟನೆ ನಿಂತರು

ಒಂದಾಗಿ ಚೀರಿದರು
"ಕೊನೆಗೂ ಸಿಕ್ಕಿತು"
ಸಿಕ್ಕಿದ್ದಾದರೂ ಏನು?
ಶಂಖಾಕಾರವಾಗಿದೆ ಎಂದರು
ಅರ್ಧಚಂದ್ರನನ್ನು ಹೋಲುತ್ತಿದೆ ಎಂದರು
ಉಜ್ಜಿದಂತೆ ಹೊಳೆಯತೊಡಗಿತು
ಅದರ ಬೆಳಕಿಗೆ ಕಣ್ಣು ಕುರುಡಾಯಿತು
ಮೂಸಿ ನೋಡಿದರು
ಮೊದಲ ಮಳೆ ಬಿದ್ದ
ಮಣ್ಣಿನ ಪರಿಮಳದ ಕಂಪು...
ಕವಿಯೊಬ್ಬ ಸ್ಪರ್ಶ ಮಾತ್ರದಿಂದ ಹೇಳಿದ
"ಇದು ಕಳೆದು ಹೋದ ನಮ್ಮ ಬಾಲ್ಯ"

## ನಾಲ್ಕೇ ನಾಲ್ಕು ಸಾಲು

1
ನಾನು ಬರೆದದ್ದು
ಯಾವುದೂ ನನ್ನ ಕವಿತೆಯಲ್ಲ...
ಬರೆಯದೆ ಉಳಿದದ್ದನ್ನು ಬಿಟ್ಟು!

2
ನಾನು ಬರೆದದ್ದು
ನಾಲ್ಕೇ ನಾಲ್ಕು ಸಾಲು
ನಾನು ಸತ್ತಾಗ ಹೆಗಲು ಕೊಡುವುದಕ್ಕೆ
ಇರಲಿ ಎಂದು...

3
ಅರಮನೆ
ನಿಜದ ಕವಿಗೆ
ಸೆರೆಮನೆ

4
ದ್ವೇಷವನ್ನು
ದ್ವೇಷಿಸದೆ
ಪ್ರೀತಿಯನ್ನು
ಪ್ರೀತಿಸೋದು ಹೇಗೆ?

5
ಬೆಂಕಿ ಕೇಳಲು
ಬಂದವರು
ನೀರು ಕೇಳಲು
ಬಾರದಿರುತ್ತಾರೆಯೇ?

# ಆತ್ಮಕತೆ

ಆತ್ಮಕತೆ ಎಂದರೆ
ಸ್ವಯಂ ಇರಿದುಕೊಳ್ಳುವುದು...
ಮುಖವನ್ನು ಚರ್ಮದಂತೆ
ಅಂಟಿಕೊಂಡ ಹೆಸರನ್ನು
ಹರಿದುಕೊಳ್ಳುವುದು!

ಇನ್ನೂ ದೇಹದ ದಾಹವೇ
ಮುಗಿಯದೇ ಇರುವಾಗ
ಈ ಹಿತವಾದ ಸುಳ್ಳು ಜಗತ್ತನ್ನು
ಬಲಿಕೊಟ್ಟು
ನನ್ನ ಆತ್ಮದ ದಾಹವನ್ನು ಹೇಗೆ ತಣಿಸಲಿ?

ನಾನು ಬರೆಯಬೇಕಾಗಿರುವುದು
ಮೊದಲ ಒಂದು ಸಾಲು...
ನನಗೆ ಗೊತ್ತು, ಅದನ್ನು ಬರೆದು ಬಿಟ್ಟರೆ
ಉಳಿದೆಲ್ಲವನ್ನೂ ನೀವೆ ಬರೆದು
ನಿಮಿಷಾರ್ಧದಲ್ಲಿ
ಮುಗಿಸಿ ಬಿಡುತ್ತೀರಿ...

ಆದರೆ ನಿಮಗೇನು ಗೊತ್ತು?
ಆ ಒಂದು ಸಾಲನ್ನು ಅಲ್ಲಾಡಿಸಿದರೆ

ನಾನೀವರೆಗೆ ಕಟ್ಟಿ ನಿಲ್ಲಿಸಿರುವ
ಈ ಬದುಕೆಂಬ ಸುಳ್ಳು ಕಟ್ಟಡ
ದಢಾರನೆ ಉರುಳಿ ಬೀಳುವುದು?
ಅದರ ಧೂಳಿನೊಳಗೆ
ನನ್ನ ಜೊತೆ ಜೊತೆಗೇ
ನೀವು ದಫನವಾಗುವ ಭಯ ನನಗೆ

ನನ್ನ ಜೊತೆ ಸರ್ವನಾಶವಾಗುವುದಕ್ಕೆ
ಸಿದ್ಧರಿದ್ದರೆ ಹೇಳಿ ಬಿಡಿ
ನನ್ನ ಆತ್ಮಕತೆಯ ಮೊದಲ ಸಾಲನ್ನು
ನಿಮ್ಮೆದೆಯ ಮೇಲೆ ನಾನು
ಚೂರಿಯಿಂದ ಕೆತ್ತಿಯೇ ಬಿಡುವೆ!

# ಅಮ್ಮ ಹಚ್ಚಿದ ಒಲೆ!

ಅಮ್ಮನ ಕೈಯಲ್ಲಿ ನಾಕು
ಪುರುಳೆಗಳಿದ್ದರೆ ಸಾಕು
ಒಲೆಯಲ್ಲಿ ಬೆಂಕಿ ಧಗ್ಗೆನ್ನುತ್ತದೆ....
ಒಲೆಗೆ ಬೆಂಕಿ ಹಚ್ಚೋದು
ಬಲು ಸುಲಭ ಎಂದು ಕೊಂಡಿದ್ದೆ....!

ಒಂದಿಷ್ಟು ಒಣ ಕಡ್ಡಿಗಳ ಸೇರಿಸಿ
ಧಾರಾಳ ಸೀಮೆಎಣ್ಣೆ ಸುರಿದರೆ
ಹೊಗೆ ಹಾವಿನಂತೆ ಸುರುಳಿ ಸುತ್ತಿ
ಭುಸ್ ಎಂದು ಕಚ್ಚಿತು
ಮೈ, ಕೈ ಮಸಿ...
ಕಣ್ಣಲ್ಲಿ ನೀರು

ಬೆಂಕಿಯ ಒಲಿಸುವ ಅಮ್ಮ
ಹಾವಾಡಗಿತ್ತಿ
ನನ್ನ ಪಕ್ಕಕ್ಕೆ ಸರಿಸಿ
ಹೊಸದೇ ಬೂದಿ ಕೆದಕಿ..
ಹನಿ ಸೀಮೆ ಎಣ್ಣೆ ಸುರಿದು
ನಾಲ್ಕು ಕಡ್ಡಿಯ ಜೋಡಿಸಿ
ಊದುಗೊಳವೆಯ ಪುಂಗಿಯಂತೆ
ನುಡಿಸಿ, ಹೊಗೆಯ ಹಾವಿನಂತೆ

ಆಡಿಸಿ, ಬೆಂಕಿ ಅರಳಿಸುವ ಪರಿ
ಅಮ್ಮನಿಗಷ್ಟೇ ಸಿದ್ಧಿಸಿದ ಸಿದ್ಧಿ

ಅಮ್ಮನಿಲ್ಲದ ಈ ದಿನ...
ಇದ್ದ ಎಲ್ಲ ಟೊಮೇಟೊ...ತೆಂಗಿನ ತುರಿ..
ಉಪ್ಪು, ಹುಳಿ, ಖಾರ ಸುರಿದರೂ..
ಸಾರಿಗೆ ಅಮ್ಮನ ಪರಿಮಳವಿಲ್ಲ,
ರುಚಿಯಿಲ್ಲ....!
ಅಮ್ಮನಂತೆ ಒಲೆಯ ಬೂದಿಯನ್ನು ಬಗೆಯಲು
ಪುಂಗಿ ನುಡಿಸಿ ಹಾವ ಆಡಿಸಲು
ನಮಗೆ ಗೊತ್ತಿಲ್ಲ....

ಅಮ್ಮ ಬೆಳಗಿದ ಒಲೆ
ನನ್ನ ಎದೆಯಲ್ಲಿ ಧಗಿಸುತ್ತಿದೆ
ಕಣ್ಣ ಕೊಡದಲ್ಲಿ ನೀರು
ಕುದಿಯುತ್ತಿದೆ

# ಹುಷಾರು!

ನೋಡಿ...ಅವನೊಟ್ಟಿಗೆ
ತುಂಬಾ ಬೆರೀ ಬೇಡಿ
ಅವನಷ್ಟು ಸರಿ ಇಲ್ಲ....

ಇತ್ತೀಚೆಗೆ ಎಲ್ಲರ ನಿಷ್ಠುರ
ಕಟ್ಕೋತಿದ್ದಾನೆ...
ನಿಮ್ಮ ಹೆಸರು ಹಾಳಾಗಬಹುದು...

ಸರ್ಕಾರದ ವಿರುದ್ಧ ಬಾಯಿಗೆ
ಬಂದದ್ದೆಲ್ಲ ಬರೀತಾನೆ....
ರಾಜ್ಯೋತ್ಸವ ಪ್ರಶಸ್ತಿಗೆ
ಟ್ರೈ ಮಾಡ್ತಾ ಇದ್ದೀರಲ್ಲ...?
ಸ್ವಲ್ಪ ಜಾಗ್ರತೆ....

ಸಾಧ್ಯವಾದರೆ
ನಿಮ್ಮ ಫೋನ್ ನಂಬರ್
ಚೇಂಜ್ ಮಾಡ್ಬಿಡಿ...
ಹಾಗೆಲ್ಲ ಮನೆಗೆ ಸೇರ್ಸೋದು
ಒಳ್ಳೇದಲ್ಲ...
ಮನೆಗೆ ಬಂದ್ರೆ ಇಲ್ಲ ಎಂದ್ಬಿಡಿ...
ಅವನೀಗ ಮೊದಲಿನ ಹಾಗಿಲ್ಲ..
ಯಾರ್ಯಾರದೋ ಸ್ನೇಹ ಇಟ್ಕೊಂಡಿದ್ದಾನೆ...

ಮೊದಲೆಲ್ಲ ಕತೆ ಕವಿತೆ
ಬರಕೊಂಡು ಚೆನ್ನಾಗಿದ್ದ...
ನನಗೂ ಗೊತ್ತು
ಇತ್ತೀಚೆಗೆ ಅವನ ತಲೆ ಕೆಟ್ಟಿದೆ..
ನೀವು ಮರ್ಯಾದಸ್ಥರು...
ಹೆಣ್ಣು ಮಕ್ಕಳಿದ್ದಾರೆ...
ನಿಮಗೆ ಸಮಾಜದಲ್ಲಿ ಒಂದು ಗೌರವವಿದೆ...
ಸ್ಟೇಟಸ್ ಇದೆ...
ಅವನಿಗೆ ಕಳ್ಕೊಳ್ಳಿಕ್ಕಾದ್ರು ಏನಿದೆ?
ನಿಮ್ಮದು ಸರ್ಕಾರಿ ಕೆಲಸ ಬೇರೆ?

ಯಾರಿಗೆ ಗೊತ್ತು?
ಯಾವ ಹುತ್ತದಲ್ಲಿ ಯಾವ
ಹಾವು ಇದೆ ಅಂತ ?
ನೀವಂತೂ ನಿಮ್ಮ
ಜಾಗ್ರತೆಯಲ್ಲಿರಿ...

ಮೊನ್ನೆ ಗೊತ್ತಲ್ಲ...
ಒಬ್ಬನ್ನ ಪೊಲೀಸರು
ಆರೆಸ್ಟ್ ಮಾಡಿರೋದು...
ಉಗ್ರರ ಜೊತೆಗೆ ನಂಟಂತೆ
ಇದ್ರೂ ಇರಬಹುದು
ಈಗ ಯಾರನ್ನೂ ನಂಬಕ್ಕಾಗಲ್ಲ...

ಯಾವುದಕ್ಕೂ
ನಿಮ್ಮ ಹುಶಾರಲ್ಲಿ ನೀವಿರೀ....
ಅವನಷ್ಟು ಸರಿ ಇಲ್ಲ...
ಕತೆ ಕವಿತೆ ಬರೀತಾ ಇರೋವಾಗ
ಅವನು ಸರಿಯೇ ಇದ್ದ...
ಆದರೆ ಈಗ ಅವನು ಮೊದಲಿನಂತಿಲ್ಲ...
ಗೊತ್ತಲ್ಲ...?
ಈಗ ಅವನು ಕತೆ ಕವಿತೆ ಬರೀತಾ ಇಲ್ಲ!

# ಸಿಹಿ ಸುದ್ದಿ.....!

ಇತ್ತೀಚೆಗೆ ಸಾವು
ಸಂಭ್ರಮದ ವಿಷಯವಾಗಿದೆ...
ಸಿಹಿ ತಿಂಡಿಯ ಅಂಗಡಿಗಳು
ಸಾಲು ಸಾಲಾಗಿ ತೆರೆಯುತ್ತಿವೆ....

ದೇಶ ಸೂತಕದ ಮನೆಯಾಗಿದೆ
ತಿಥಿಯೂಟ ಹಬ್ಬದ ಸಂಭ್ರಮ
ಪಡೆದಿದೆ....

ಮನರಂಜನೆಗಳಿಗೆ ಸಿನಿಮಾ ಮನೆಗಳು
ಟಿವಿ ಪೆಟ್ಟಿಗೆಗಳು ಸಾಕಾಗುತ್ತಿಲ್ಲ.
ನಟನೆಗಳನ್ನು ನೋಡಿ ಮನಸ್ಸುಗಳಿಗೆ
ಆಲಸ್ಯ ಹಿಡಿದು ಹೋಗಿದೆ...
ಅವಕ್ಕೆ ನಿಜ ಮನುಷ್ಯನೊಬ್ಬ
ವಿಲ ವಿಲ ಒದ್ದಾಡೋದು ನೋಡಬೇಕಾಗಿದೆ...

ಹೆಣ್ಣೊಬ್ಬಳ ಅತ್ಯಾಚಾರದ ಸುದ್ದಿ
ಎಷ್ಟು ರಸವತ್ತಾಗಿರುತ್ತದೆಯೆಂದರೆ
ವರದಿಗಾರ ಈಗಷ್ಟೇ ಒಂದು ಹೆಣ್ಣನ್ನು
ಕೊಂದು ಅದರ ರಕ್ತದಿಂದ ಸುದ್ದಿಯನ್ನು
ಹೀರಿ ಕೊರೆಯುತ್ತಿದ್ದಾನೆ
ಯಾಕೆಂದರೆ ಸುದ್ದಿಯ ಗುರಿ
ಮನ ರಂಜಿಸೋದು

ಮುದ್ರಣ ಮಶೀನ್‌ಗಳೆಲ್ಲ
ರುದ್ರವರ್ಣ ತಾಳಿವೆ
ಸುರಿದಷ್ಟೂ ಬಣ್ಣಗಳ
ದಾಹ ತೀವ್ರವಾಗಿದೆ

ಇಂಕುಗಳ ಬದಲಿಗೆ
ರಕ್ತವನ್ನೇ ಪೂರೈಸೂದಕ್ಕೆ
ಜನರನ್ನು ನೇಮಿಸಲಾಗಿದೆ...
ಇಷ್ಟಕ್ಕೂ
ಬಣ್ಣದ ಇಂಕುಗಳು ಮಾರುಕಟ್ಟೆಯಲ್ಲಿ
ಭಾರೀ ದುಬಾರಿ...ರಕ್ತ ಬಲು ಅಗ್ಗ!
ಪತ್ರಿಕೆಗಳು ಬಣ್ಣ ಬಣ್ಣದ
ಪುಟಗಳಾಗಿ ಸೂಳೆಯರಂತೆ
ಮೈ ಬಳುಕಿಸುತ್ತಿವೆ

ದೀಪಾವಳಿಗೆ ಹಣತೆಯ
ಬೆಳಕು ಸಾಕಾಗೋದಿಲ್ಲ
ನೆರೆಮನೆಗೆ ಬಿದ್ದ ಬೆಂಕಿಗೆ
ನಮ್ಮ ಕಣ್ಣು ಹೃದಯ
ಧಗ ಧಗ ಉರಿದರೆ
ಹಬ್ಬಕ್ಕೊಂದು ಮಜಾ...

ದೇಶ ಪ್ರೇಮಕ್ಕೆ ಒಂದಿಷ್ಟು
ರಕ್ತ ಮೆತ್ತಿದರೇನೆ
ರುಚಿ ಜಾಸ್ತಿ....

ಇತ್ತೀಚೆಗೆ ಸಾವು
ಸಂಭ್ರಮದ ವಿಷಯವಾಗಿದೆ...
ಸಿಹಿ ತಿಂಡಿಯ ಅಂಗಡಿಗಳು
ಸಾಲು ಸಾಲಾಗಿ ತೆರೆಯುತ್ತಿವೆ....

# ಒಂದಿಷ್ಟು ಪದ್ಯಗಳು

1

**ಭವಿಷ್ಯ**

ಮರವೊಂದರ ಎಲೆ
ಎಲೆಗಳ ಅಂಗೈ ರೇಖೆಗಳಲ್ಲಿ
ಈ ಭೂಮಿಯ ಭವಿಷ್ಯ ಬರೆದಿರೋದು
ಯಾವ ಜ್ಯೋತಿಷಿಗೂ ಗೊತ್ತಿಲ್ಲ

2

**ಸದ್ದು**

ಮರ ಗಿಡಗಳಿಗೂ ಆತ್ಮ
ಇರಬಹುದೇ
ಎಂಬ ಪ್ರಶ್ನೆ ಹೊಳೆದಂದಿನಿಂದ
ನಡೆಯುವಾಗೆಲ್ಲ
ನನ್ನ ಪಾದ ತುಳಿತಕ್ಕೆ
ಹುಲ್ಲುಗರಿಗಳು ನರಳುವ
ಸದ್ದು ಕೇಳುತ್ತಿವೆ...

3

**ಮೊಳಕೆ**

ನಿನ್ನೆ ನನ್ನ ಮನೆಯಂಗಳದಲ್ಲಿ

ಧೋ ಎಂದು ಹೊಯ್ದ
ದುಃಖದ ಮಳೆ...
ಇಂದು ನೋಡಿದರೆ
ಅಂಗಳದ ತುಂಬಾ
ಕವಿತೆಯ ಬೀಜಗಳು
ಮೊಳಕೆ ಒಡೆದಿವೆ!

4

**ಮತ್ತೊಮ್ಮೆ**

ಗಣರಾಜ್ಯೋತ್ಸವದ ದಿನ
ಬೀದಿಯಲ್ಲಿ ಸಂಭ್ರಮಗಳೆಲ್ಲ ಕಳಚಿ
ಅನಾಥವಾಗಿ ಬಿದ್ದಿದ್ದ
ಪ್ಲಾಸ್ಟಿಕ್ ಧ್ವಜಗಳ
ಮೇಲೆ ಯಾರ್ಯಾರದೋ
ಪಾದ ಗುರುತುಗಳು!
ಮರುದಿನ ಬೀದಿ ಗುಡಿಸುವವರ
ಮಕ್ಕಳ ಕೈಯಲ್ಲಿ
ಈ ದೇಶಕ್ಕೆ ಮತ್ತೊಮ್ಮೆ
ಗಣರಾಜ್ಯೋತ್ಸವ!

# ಮೈಸೂರ್ ಪಾಕ್ ಮತ್ತು ಇತರ ಕವಿತೆಗಳು

1

**ಮೈಸೂರ್ ಪಾಕ್**

ಈದ್ ದಿನ ಮುಸ್ತಫಾ
ಕಚೇರಿಯಲ್ಲಿ
ಮೈಸೂರ್ ಪಾಕ್ ಹಂಚಿದ....
ಮೈಸೂರ್ ಏನೋ
ಚೆನ್ನಾಗಿದೆ
ಆದರೆ "ಪಾಕ್" ಕುರಿತಂತೆ
ಕೆಲವರಿಗೆ
ಸಣ್ಣದೊಂದು ಅನುಮಾನ...

2

**ಹಾರ್ಮೋನಿಯಂ**

ಕುರುಡನೊಬ್ಬ ಹಾರ್ಮೋನಿಯಂನ್ನು
ಅದ್ಭುತವಾಗಿ ನುಡಿಸುತ್ತಿದ್ದ.
ಅದೆಷ್ಟೋ ಕಾಲದ
ಬಳಿಕ ಅವನಿಗೆ ಕಣ್ಣು ಬಂತು
ಇದೀಗ ಅದೇ ಹಾರ್ಮೋನಿಯಂ

ಕೀ ಬೋರ್ಡ್ ಮುಂದೆ
ಅವನ ಬೆರಳುಗಳು
ತಡವರಿಸುತ್ತಿವೆ....!
ಕಣ್ಣು ಮುಚ್ಚದೆ ಅವನು
ಹಾರ್ಮೋನಿಯಂ ನುಡಿಸಲಾರ!!

3

**ಬಾಹುಗಳು**

ಗೆಳೆಯನ ಬಾಹುಗಳಲ್ಲಿ
ಆಸರೆಗೆಂದು ಅವಳು ಧಾವಿಸಿದಳು..
ಸುತ್ತಿಕೊಂಡ ತೋಳುಗಳು
ನಿಧಾನಕ್ಕೆ ಬಂಧನಿಕೆಯಂತೆ
ಬಿಗಿಯಾಗ ತೊಡಗಿದವು...
ಶತಮಾನಗಳ ಬಳಿಕ
ಆ ತೋಳನ್ನು ಬಿಡಿಸಿದಾಗ
ಸತ್ತು ಹೋದ ಮರಗಳಂತೆ
ಅಲ್ಲಿ ನೂರಾರು ಅಸ್ಥಿ ಪಂಜರಗಳು...!

4

**ಅನಾಥ ಹೆಣ**

ರೈಲ್ವೆ ಹಳಿಯ ಮೇಲೆ
ಒಂದು ಅನಾಥ ಹೆಣ ಸಿಕ್ಕಿದೆ....
ಶರ್ಟ್ ಮೇಲೆ
ಅಂಬೇಡ್ಕರ್ ಟೈಲರ್
ಅಂಗಡಿಯ ಹೆಸರಿದೆ...
ಬೆನ್ನಿಗೆ ಚುಚ್ಚಿದ ಚೂರಿಯ ಮೇಲೆ
ಮೋದಿ ಕಂಪೆನಿಯ ಲಾಂಛನವಿದೆ...
ಅಂದ ಹಾಗೆ ಈ ರೈಲ್ವೆ ಹಳಿ
ಗುಜರಾತ್ ಕಡೆಗೆ ಹೋಗುತ್ತದೆ.....

5

## ಸ್ಫೋಟ

ಹೀಗೊಂದು ವಿಚಿತ್ರ ಕನಸು....
ಸಬ್ಸಿಡಿಯಿಲ್ಲದೆ ಖಾಲಿ ಬಿದ್ದಿದ್ದ
ಬಡವರ ಮನೆಯ ಗ್ಯಾಸ್ ಸಿಲಿಂಡರ್‌ಗಳು
ಇದ್ದಕ್ಕಿದ್ದಂತೆಯೇ ಸ್ಫೋಟಗೊಂಡವು
ಆ ಸ್ಫೋಟ ಎಷ್ಟು ಪ್ರಬಲವಾಗಿತ್ತೆಂದರೆ
ಸರಕಾರಗಳೆಲ್ಲ
ಛಿದ್ರ ಛಿದ್ರವಾಗಿ ಬಿದ್ದಿವೆ..!!

# ಮಾವಿನ ಗೊರಟೆ
# ಮತ್ತು ಇತರ ಕವಿತೆಗಳು

1
**ಮಾವಿನ ಗೊರಟೆ**

ನಾನು ತಿಂದು ಎಸೆದ
ಮಾವಿನ ಗೊರಟೆ
ನನ್ನ ಕವಿತೆ!
ಅದು
ಯಾವುದಾದರೂ
ಹಸಿ ಎದೆಯ ಮೇಲೆ ಬಿದ್ದು
ಮೊಳಕೆಯೊಡೆದು
ಗಿಡವಾಗಿ, ಮರವಾಗಿ
ಹಣ್ಣುಗಳು ತೂಗಿ
ಹಕ್ಕಿಗಳಿಗೆ ಗುಡಿಲಾಗಿ,
ನೂರಾರು ಜನರಿಗೆ ನೆರಳಾಗಿ
ಬೆಳೆದರೆ ಅದಕ್ಕೆ ನಾನು
ಹೊಣೆಯಲ್ಲ...!

2

**ಮರು ಹುಟ್ಟು**

ರಾತ್ರಿ ಕನಸಲ್ಲಿ
ಭೀಕರ ಅಪಘಾತಕ್ಕೆ ಸಿಲುಕಿ
ಒಂದೇ ಏಟಿಗೆ ನಾನು ಸತ್ತೆ !
ಮುಂಜಾನೆ ಎದ್ದು
ಕಣ್ಣು ತೆರೆದಾಗ
ನನಗೆ ಮರು ಹುಟ್ಟು !!

3

**ಮುಗ್ಧ**

ಕನಸಲ್ಲಿ ವೇಶ್ಯೆಯ ಜೊತೆ
ಮಲಗಿದ ಮುಗ್ಧ ಗೋಪಿ
ಬೆಳಗಾದದ್ದೇ
ಎಚ್‌ಐವಿ ಪರೀಕ್ಷೆಗೆಂದು
ವೈದ್ಯರೆಡೆಗೆ ಧಾವಿಸಿದ !

4

**ಸಮಯ**

ಜೀಸಸ್‌ನ ಮೊಳೆ ಹೊಡೆದ
ಎರಡು ಕೈಗಳಂತೆ
ಗಡಿಯಾರದ ಮುಳ್ಳುಗಳು
ಸಮಯವನ್ನು ತೋರಿಸುತ್ತಿತ್ತು
ಟಿಕ್
ಟಿಕ್
ಟಿಕ್
ರಕ್ತ ತೊಟ್ಟಿಕ್ಕುತ್ತಿತ್ತು....

# ಮನೆ ಸೇರುವುದೆಂದರೆ....

ಎರಡೆರಡು ಮೆಟ್ಟಿಲುಗಳ ಹಾರಿ ಏರಿ
ಮನೆ ಸೇರುವ ತವಕದಲ್ಲಿದ್ದ
ಕಂದನಿಗೆ ಹೇಳಿದೆ....
ಮಗು, ಇಡು ಹೆಜ್ಜೆ ಒಂದೊಂದೇ
ಪ್ರತಿ ಮೆಟ್ಟಿಲಿಗೂ ನಿನ್ನ ಪುಟ್ಟ
ಪಾದದ ಸ್ಪರ್ಶ ಭಾಗ್ಯ ಸಿಗಲಿ...

...ಪ್ರತಿ ಮೆಟ್ಟಿಲ
ಪರಿಚಯ ಭಾಗ್ಯ ನಿನ್ನ
ಪುಟ್ಟ ಪಾದಕ್ಕೂ ಸಿಗಲಿ...

ಬೀಳುವ ದಿನಗಳಲ್ಲಿ
ಯಾವ ಮೆಟ್ಟಿಲೂ ನಿನಗೆ
ಮುಖ ತಿರುಗಿಸದಿರಲಿ...
ತಾಯ ಮಡಿಲಂತೆ
ನಿನ್ನ ಎತ್ತಿಕೊಳಲಿ

ಮನೆ ತಲುಪುವುದೆಂದರೆ
ಪ್ರತಿ ಮೆಟ್ಟಿಲ ಮೇಲೆ ನಿನ್ನ ಹೆಜ್ಜೆಗಳ
ರುಜು ಹಾಕುವುದು ಮಗುವೆ...
ನೀನು ಮನೆ ತಲುಪಿದ್ದಕ್ಕೆ
ಅವೆಲ್ಲ ಒಂದು ದಿನ
ಸಾಕ್ಷಿ ನುಡಿಯುವುದು....

# ಹೆಣ್ಣು ಮಲಗೋದು...!

ಮಲಗೋದು ಎನ್ನೋ ಶಬ್ದ
ಹೆಣ್ಣಿನ ಪಾಲಿಗೆ ಅನೈತಿಕ...
ಯಾರ ಜೊತೆಗೆ ಎಂಬ
ಜೋಡಿ ಪದ ತಕ್ಷಣ
ಪ್ರಶ್ನೆಯಾಗಿ ಎರಗುತ್ತದೆ...

ಅವಳು ಗಂಡನ ಜೊತೆ ಮಲಗಬೇಕು..
ಅಥವಾ ಮಗುವಿನ ಜೊತೆಗೆ...
ಒಬ್ಬಂಟಿ ಮಲಗುವ ಹೆಣ್ಣಿನ ಸುತ್ತ
ಸಾವಿರ ಕಣ್ಣುಗಳು....

ಅದಕ್ಕಾಗಿಯೆ ಹೆಣ್ಣು
ಗಂಡನ ಕನಸು ಕಾಣುತ್ತಾಳೆ..
ಅದು ನಿಜಕ್ಕೂ
ನೆಮ್ಮದಿಯಿಂದ ಮಲಗುವ ಕನಸು...

ಆದರೆ ಅವಳಿಗೆ ಬೇಗ
ಅರಿವಾಗಿ ಬಿಡುವುದು
ನನ್ನ ನಿದ್ದೆ ನನ್ನದಲ್ಲ ಎನ್ನೋದು
ಅವನ ಮಲಗಿಸೋದಕ್ಕಾಗಿ

ಅವನ ಜೊತೆ ಮಲಗಬೇಕೆ
ಹೊರತು ತಾನು ಮಲಗುವುದಕ್ಕಲ್ಲ...

ಪ್ರತಿ ಬಾರಿ ಗಂಡ
ಮಲಗಿದ ಬಳಿಕವಷ್ಟೇ
ಅವಳು ಮಲಗಬೇಕು...
ಆತನಿಗೆ ನಿದ್ದೆಯಿಲ್ಲ ಎಂದರೆ
ಇವಳಿಗೂ ನಿದ್ದೆ ಇಲ್ಲ....

ಪ್ರತಿ ಬಾರಿ ಯೋಚಿಸುತ್ತಾಳೆ
ನನಗಾಗಿ ಮಲಗಿದ್ದೆ ಇಲ್ಲ...
ಒಮ್ಮೆ ಕಣ್ತುಂಬಾ ನಾನು
ನನ್ನ ಜೊತೆಯೇ ಮಲಗಬೇಕು...
ನನಗಾಗಿ ಮಲಗಬೇಕು

ಇತ್ತೀಚೆಗೆ....
ಗೋರಿಯೊಳಗೆ
ಗಂಡನ ಹಂಗಿಲ್ಲದೆ
ಒಬ್ಬಂಟಿಯಾಗಿ... ಸುಖವಾಗಿ...
ನಿದ್ದೆ ಹೋದ ಹೆಣ್ಣು ಜೀವಗಳು
ಅವಳ ಕನಸಲ್ಲಿ ಆಗಾಗ
ಕಾಣಿಸಿ ಕೊಳ್ಳುತ್ತಾರೆ...!

# ನಿನ್ನ ಎದೆ

ನಿನ್ನ ಎದೆ
ಒಂದು ಸಣ್ಣ ಕುಂಡ ಕಣೋ
ಹೆಚ್ಚೆಂದರೆ
ಒಂದು ಪುಟ್ಟ ಗಿಡ ಬೆಳೆಸಿ
ಒಂದೆರಡು ಹೂ ಅರಳಿಸಿ
ಅದನ್ನು ಸಾರ್ಥಕ ಪಡಿಸಿಕೊ

ನಿನ್ನ ಎದೆ ಪುಟ್ಟ ಬುಟ್ಟಿ ಕಣೋ,
ನಾಲ್ಕು ಗಿಡಗಳ ಹೂಗಳಿಂದ
ತುಂಬಿ ಹೋಗುವಷ್ಟು ಸಣ್ಣದು
ತುಂಬಿಕೊ ತುಂಬಿಕೊಳ್ಳುವಷ್ಟು

ಎದೆ ಅಗ್ನಿಕುಂಡವೂ ಅಲ್ಲ
ಕಸದ ಬುಟ್ಟಿಯೂ ಅಲ್ಲ

# ಬಾಮಿಯಾನ್‌ನಲ್ಲಿ ಬುದ್ಧ

ಬಾಮಿಯಾನ್‌ನಲ್ಲಿ
ತಾಲಿಬಾನಿಗಳು
ಬುದ್ಧನ ಬೃಹದೆತ್ತರದ
ವಿಗ್ರಹಗಳನ್ನು
ಮುರಿದು ಹಾಕಿದರು
ಎಂದರೆ ಸುಳ್ಳು

ಸಾಕ್ಷಾತ್
ಬುದ್ಧನೇ ಅದನ್ನು ಮುರಿದು
ಹಾಕಿದ

ಹಿಂದೆ ಅಲ್ಲಿ ಬುದ್ಧನಿದ್ದದ್ದು
ನಿಜವಾದರೆ
ಈಗಲೂ ಅಲ್ಲಿ ಬುದ್ಧನಿದ್ದಾನೆ

ಕೆಲವರು
ಬುದ್ಧನ ಕಟ್ಟುತ್ತಾ
ಅವನ ಹುಡುಕುತ್ತಾರೆ
ಇನ್ನು ಕೆಲವರು
ಅವನ ಮುರಿಯುತ್ತ

ಆದರೆ ಅವನು
ಕಟ್ಟುವ ಮೊದಲೂ ಇದ್ದ
ಮುರಿದ ಬಳಿಕವೂ ಇರುವ

# ಕಾಗೆ ಮರಿಯ ಹಾಡು

ನಾನೊಂದು
ಪುಟ್ಟ ಕಾಗೆ ಮರಿ

ಹಾರಿ ಹೋದ
ನನ್ನ ಕಾಕಮ್ಮನಿಗಾಗಿ
ಕಾಯುತ್ತಿದ್ದೇನೆ

ನನ್ನಮ್ಮನ ಬಾಯಿಂದ
ರೊಟ್ಟಿ ಕಸಿದ
ನರಿಯ ಕತೆಯನ್ನು ಓದುತ್ತಾ,
ಅಮ್ಮ ಹೋದ ದಾರಿ
ಕಾಯುತ್ತಿದ್ದೇನೆ,
ಅಮ್ಮ ಕಾಗೆ ತರುವ
ತುಂಡು ರೊಟ್ಟಿಗಾಗಿ

'ಜಾಣ ನರಿ'
ನನ್ನ ತರಗತಿಗೆ ಪಾಠ!
ಅದು ನನ್ನ ಪರಂಪರೆ
ನನ್ನ ಅಮ್ಮನ
ಬಣ್ಣ ಎಷ್ಟು ಚಂದ?
ಧ್ವನಿ ಎಷ್ಟು ಚಂದ ?

ಎಂದು ವಂಚಿಸಿದ ನರಿ ಜಾಣ!
ನಾವೆಲ್ಲರೂ ಜಾಣರಾಗಬೇಕು
ಕಾಗೆಯಂತೆ
ದಡ್ಡರಾಗಬಾರದು
ಇದು ನನಗೆ ಪಾಠ

ನಾನಿದನ್ನುಕಲಿತು
ಪರೀಕ್ಷೆ ಬರೆದು
ಜಾಣನಾಗಬೇಕು

ಆದರೂ ನನ್ನ ಅಮ್ಮನ ಬಣ್ಣ
ನನಗೆ ಎಷ್ಟು ಚಂದ!
ನನ್ನ ಅಮ್ಮನ
ಧ್ವನಿ ಎಷ್ಟು ಚಂದ!

ನಾನೊಂದು
ಪುಟ್ಟ ಕಾಗೆ ಮರಿ

ಹಾರಿ ಹೋದ
ಅಮ್ಮನಿಗಾಗಿ
ಕಾಯುತ್ತಿದ್ದೇನೆ

# ನಿನ್ನೆ ಉದುರಿದ ಹನಿಗಳು

1
ತುಂಬಿದ ಮನ
ತುಳುಕುವುದು
ಕಣ್ಣಲ್ಲಿ
2
ಇಲ್ಲ, ನಾನಿನ್ನು ಯಾರನ್ನೂ
ನೋಯಿಸೂದಿಲ್ಲ ಎಂದೆ
ಅಷ್ಟಕ್ಕೇ ಅವನು ನೊಂದು ಬಿಟ್ಟ
3
ನನ್ನ ಕೈಯಲ್ಲಿರುವ
ಒಂದು ತುತ್ತು
ಅನ್ನ
ಬಾಯಿಗಿಡುವ ಮುನ್ನ..
ಯಾರದೋ ಬಟ್ಟಲಿಂದ
ಕಸಿದುಕೊಂಡೆನೆನ್ನುವ
ತಳಮಳ
4
ನಾನು ಅವನೆಡೆಗೆ
ಬೀಸಿದ ಕತ್ತಿ ಏಟಿಗಿಂತ
ಹರಿತವಾಗಿತ್ತು
ಅವನ ಕ್ಷಮೆ

5
ಅವಳೊಂದು
ಜೇನು
ಗೂಡು
6
ಮನೆ
ಕತ್ತಲು
ಅ
ಕ್ಷರದಿಂದ
ಹಣತೆ ಹಚ್ಚಿದಳು
7
ಕವಿತೆ ಬರೆದಾದ ಮೇಲೆ
ಇದನ್ನೆಲ್ಲೋ
ಓದಿದಂತಿದೆಯಲ್ಲ
ಎಂಬ ಕಳ್ಳ ಭಾವ
8
ಕಣ್ಣು ದಾನ ಮಾಡಿ
ನಾನು ಸತ್ತೆ.
ಇದೀಗ ನನ್ನ ಗೋರಿಯ
ಮುಂದೆ ನನ್ನದೇ ಕಣ್ಣುಗಳು
ಕೃತಜ್ಞತೆಯಿಂದ
ಅಳುತ್ತಿವೆ

# ಚದುರಿದ ಪದಗಳು

1
ಬುದ್ಧ ಅಂದರೆ
ಸಾವಿಲ್ಲದ ಮನೆಯ
ಸಾಸಿವೆ

2
ಹುಟ್ಟು ಕುರುಡು ಮಗು
ದೀಪಾವಳಿಯ ದಿನ
ಹಣತೆ ಹಚ್ಚಿತು

3
ವಿದ್ವಾಂಸ ಪಟ್ಟಿ ಮಾಡಿದ
ಸಾವಿನಂಚಿನಲ್ಲಿರುವ ಭಾಷೆಗಳಲ್ಲಿ
ಮನುಷ್ಯ ಭಾಷೆಯ ಹೆಸರಿರಲಿಲ್ಲ
ಬಹುಷಃ ಅದು ಈಗಾಗಲೇ ಸತ್ತಿರಬೇಕು!

4
ಕಾಲೇಜಿನ ಮೊದಲ ದಿನ
ಚುಡಾಯಿಸದ
ಹುಡುಗರ ನೆನೆದು
ಅವಳು ಕನ್ನಡಿ ಮುಂದೆ
ಗೊಳೋ ಎಂದು ಅತ್ತಳು!

5
ಅಷ್ಟೂ ಹೂಗಳನ್ನು
ಬಿಟ್ಟು ದುಂಬಿಯೊಂದು
ಅವಳ ಕಿವಿಯ
ಮೇಲೆ ಕೂತಿತು

# ಹೆಬ್ಬೆರಳು

ಅದೇನೋ ಮಾಡಲು ಹೋಗಿ
ನನ್ನ ಹೆಬ್ಬೆರಳು ಗಾಯಗೊಂಡಿತ್ತು
ನೆತ್ತರು ಒಸರುವುದು ಬೇಡವೆಂದು
ಬಟ್ಟೆ ಸುತ್ತಿಕೊಳ್ಳುತ್ತಿರುವಾಗ
ಕರೆದಂತಾಯಿತು
"ಏನೋ ಏಕಲವ್ಯ?"
ತಲೆಎತ್ತಿ ನೋಡಿದರೆ
ನನ್ನ ಗುರುಗಳು ನಗುತ್ತಿದ್ದರು

"ನಾನಂತೂ ಕೇಳಿಲ್ಲ ಗುರುಕಾಣಿಕೆ,
ಹೇಳು
ಯಾರಿಗೆ ಕೊಟ್ಟೆ ನಿನ್ನ
ಹೆಬ್ಬೆರಳು ?"

ನಕ್ಕು ಬಾಗಿದೆ..
"ಕಲಿಸು ಎಂದು ನಾನು
ಅವನಲ್ಲಿ ಕೇಳಲಿಲ್ಲ,
ಕಲಿಸಿದ..
ನಾನು ಕೊಡಲಾರೆ
ಎಂದು ಹೇಳುವ ಮೊದಲೇ
ಕತ್ತರಿಸಿಕೊಂಡ
ನನ್ನ ಹೆಬ್ಬೆರಳ'

ಗುರುಗಳು ಮೆದುವಾದರು
ಚಾಚಿದರು ತಮ್ಮ ಅಂಗೈಯನ್ನೂ
'ಅವರಿಗೂ ಹೆಬ್ಬೆರಳು ಇದ್ದಿರಲಿಲ್ಲ'

"ಸಮಯ ಕೆಟ್ಟ ಗುರು.
ಮೊದಲು ದಕ್ಷಿಣೆ
ಕಿತ್ತುಕೊಂಡು,
ಬಳಿಕ ಪಾಠ ಕಲಿಸುತ್ತಾನೆ'
ಎನ್ನುತ್ತಾ ಗುರುಗಳು
ನನ್ನತಲೆ ಸವರಿ
ನಡೆದು ಹೋದರು..

ಬಟ್ಟೆ ಸುತ್ತಿದ್ದರೂ
ನನ್ನ ಹೆಬ್ಬೆರಳಿಂದ
ರಕ್ತ ಒಸರುವುದು ನಿಂತಿರಲಿಲ್ಲ

# ಉಂಗುರ

1

ರಾತ್ರಿ ಕನಸಲ್ಲಿ
ಬಂದವಳು
ಇಲ್ಲೇ ಕೋಣೆಯಲ್ಲೆಲ್ಲೋ
ಬಚ್ಚಿಟ್ಟುಕೊಂಡಂತೆ

ಅವಳ ಕಾಲ ಗೆಜ್ಜೆಯ
ಉದುರಿದ ಮಣಿ
ಇಲ್ಲೇ ಎಲ್ಲೋ ಅನುರಣಿಸಿದಂತೆ

ರಾತ್ರಿ ಕಂಡದ್ದು
ಕನಸೇ ಆಗಿರಬೇಕು ಏಕೆ?

2

ನಾನು ಬರೆಯುತ್ತೇನೆ
ನೀವು ಒಪ್ಪಬೇಕು ಎಂದಲ್ಲ..
ನಾನು ಬರೆಯುತ್ತೇನೆ
ನೀವು ತಿರಸ್ಕರಿಸಬೇಕೆಂದೂ ಅಲ್ಲ..
ಶಾಂತ ಸಾಗರದಂತೆ ನಿದ್ರಿಸುವ
ನಿಮ್ಮ ಎದೆಗಡಲಲ್ಲಿ
ನಾನು ಬೀಳಿಸುವ ಸಣ್ಣದೊಂದು ಉಂಗುರ

ಮುಂದೊಂದು ದಿನ
ಮೀನ ಗರ್ಭ ಹರಿದು
ಶಕುಂತಳೆಯ ಕತೆಯಾಗಿ
ಹೊರಬರಬಹುದೆನ್ನುವ
ಸಣ್ಣ ಆಸೆಯಷ್ಟೇ ನನ್ನದು

3

ಬಾಣಎಸೆದದ್ದು
ಶತ್ರುವಿನ ಕಡೆಗೆ
ಆದರೆ ನನ್ನ ದುರ್ವಿಧಿಯೇ
ಅದು ಇರಿಯುತ್ತಾ
ಹೋದದ್ದು ನನ್ನ
ಮಿತ್ರರ ಎದೆಯನ್ನೇ..

# ಪುಸ್ತಕ

ಒಂದು ಪುಸ್ತಕ
ಬೇಕಾಗಿತ್ತು.
ಇಡೀ ದಿನ ಹುಡುಕುತ್ತಿದ್ದೆ

ಕೊನೆಗೂ ಸಿಕ್ಕಿತು
ಆದರೆ ಹುಡುಕುತ್ತಿದ್ದ ಪುಸ್ತಕವಲ್ಲ

ಕಳೆದ ವಾರ ಹುಡುಕಿ
ಸುಸ್ತಾಗಿ ಕೈ ಬಿಟ್ಟ ಪುಸ್ತಕ
ಇಂದು ನನ್ನೆದುರು
ಹಲ್ಲು ಕಿರಿಯುತ್ತಿತ್ತು

ಬಹುಷಃ ನಮಗೇನು
ಬೇಕು ಎನ್ನುವುದನ್ನು
ವಿಧಿಯ ಕೈಯಲ್ಲಿ ಕೊಟ್ಟ ಕಾಲ
ಪುಸ್ತಕದ ರೂಪದಲ್ಲೇ ನನ್ನ ಅಣಕಿಸಿದಂತೆ

ಬೇಡವೆಂದರೂ ಅದನ್ನು
ಕೈಗೆತ್ತಿ ಸುಮ್ಮಗೆ ಬಿಡಿಸಿ
ನಕ್ಕು ಕಪಾಟಿನೊಳಗಿಡುತ್ತೇನೆ

# ಇರುವೆಗೆ

ನನ್ನ ಕಿರುಬೆರಳ ಹಿಡಿದು
ಜಗ್ಗುತ್ತಿರುವ ಪುಟ್ಟ ಇರುವೆಯೇ
ತಡೆ ತಡೆ, ಬಂದೆ !

ಈ ನನ್ನ ದೊಡ್ಡ ಮೆದುಳು,ಸಣ್ಣ ಹೃದಯ
ದೊರೆಯ ಎಡೆಗಿನ ದಾರಿಗೆ ಅಡ್ಡಿಯಾಗಿದೆ
ಮುನ್ನಡೆಸು ನನ್ನ

ಪುಟ್ಟ ಕಣ್ಣಿನ ನನ್ನ ಪುಟಾಣಿ ಇರುವೆಯೇ
ನೀನು ನನ್ನ ಧಾರ್ಮಿಕ ಗುರು
ನನ್ನ ದೊರೆ ನನಗಾಗಿಯೇ
ಆಕಾಶದಿಂದ ಇಳಿಸಿದ ಸಂತ ನೀನು

ನಿನ್ನ ಸೂಜಿಯ ಮೊನೆಗಿಂತಲೂ
ಸಣ್ಣದಾದ ಮೆದುಳು ಮತ್ತು
ಎಲ್ಲ ಅಗಲಗಳನ್ನು ಮೀರಿದ ಹೃದಯ ಮಾತ್ರ
ನನ್ನನ್ನು ನನ್ನ ದೊರೆಯೆಡೆಗೆ ತಲುಪಿಸೀತು

# ಪ್ರತಿಧ್ವನಿ

ಕೊಳವೆ ಬಾವಿಯೊಳಗೆ ಬಿದ್ದ
ಮಗುವೊಂದನ್ನು
ಹೊರ ತೆಗೆಯಲಾಗದೆ
ಯಂತ್ರಗಳೆಲ್ಲ ಕಣ್ಣೀರು ಸುರಿಸುತ್ತಿದ್ದವು

ಬುಲ್ಡೋಜರ್‌ಗಳ ಕೋರೆ ಹಲ್ಲುಗಳಿಗೆ
ಸಿಲುಕಿ ನೆಲ ಕಚ್ಚಿ ಬಿದ್ದ ಜೋಳದ ತೆನೆಗಳು
ಚಿಂದಿಯಾಗಿ ರಕ್ತ ಸುರಿಸುತ್ತಿರುವ ಗದ್ದೆ
ತಂದೆ ಹೇಳಿದ, ಅಗೆದದ್ದು ಸಾಕು
ಇನ್ನಷ್ಟು ಬಗೆದರೆ ನನ್ನ ಜಮೀನು
ಸರ್ವನಾಶವಾಗತ್ತೆ

ಕೊಳವೆ ಬಾವಿಗೆ ಚಪ್ಪಡಿ ಕಲ್ಲು ಮುಚ್ಚಿ
ಹುಡುಗನನ್ನು ಅಲ್ಲೇ
ದಫನ ಮಾಡಲಾಯಿತು

ಘಟನೆ ನಡೆದು ಅದೆಷ್ಟೋ ದಿನಗಳಾಗಿವೆ
ಈಗೀಗ ಒಮ್ಮೊಮ್ಮೆ ಆ ಚಪ್ಪಡಿ ಕಲ್ಲನ್ನು
ಯಾರೋ ಅಲುಗಾಡಿಸಿದಂತೆ,
ಒಳಗಿಂದ ಮೊರೆಯಿಟ್ಟಂತೆ
ಊರಿನ ಜನರ ಅನುಭವ !

ಜಮೀನು, ತೋಟಗಳೆಲ್ಲ
ಹನಿ ನೀರಿನ ಪಸೆಯೂ ಇಲ್ಲದೆ
ಸುಟ್ಟು ಬೂದಿಯಾಗಿವೆ
ಹುಡುಗ ಆ ಕೊಳವೆಯ ಮೂಲಕ
ದಾರಿ ಮಾಡುತ್ತಾ ಸಾಗಿದ್ದಾನೆ
ಅಂತರ್ಜಲ ಅರಸುತ್ತಾ..
ಒಂದಲ್ಲ ಒಂದು ದಿನ ಅವನು
ಮರಳಿ ಬರುವನೆಂದು
ತನ್ನೂರಿಗೆ ನೀರಿನ ಬೇರು ತರುವನೆಂದು
ಊರು ಅವನ ನಿರೀಕ್ಷೆಯಲ್ಲಿದೆ

ಭೂಮಿಗೊಮ್ಮೆ ಕಿವಿ ಹಚ್ಚಿ ನೋಡಿ
ಅದರ ನಾಭಿಯಿಂದ
ಹೊರಡುತ್ತಿರುವ ಅವನ ಹೆಜ್ಜೆ ಸಪ್ಪಳ
ನಿಮ್ಮ ಎದೆಯೊಳಗೂ ಪ್ರತಿಧ್ವನಿಸುವುದು !

# ಹನಿಗಳಲ್ಲಿ ಇರುವೆ

1

ಹರಿದು ಬಿದ್ದ
ಕರಿಮಣಿ ಸರದಂತೆ
ಚೆಲ್ಲಾಪಿಲ್ಲಿಯಾಗಿರುವ
ಇರುವೆಗಳು

2

ದೇವರೇ,
ಪುಟ್ಟ ಇರುವೆಗೆ
ದೊಡ್ಡ ದುಃಖ ಕೊಡಬೇಡ
ಅದರ ಕಣ್ಣೀರಲ್ಲೇ ಅದು
ಮುಳುಗಿ ಸತ್ತೀತು ಪಾಪ!

3

ಸಕ್ಕರೆ ಕಾಯಿಲೆ
ಎಂದು ವೈದ್ಯರ ಮನೆಯ
ಬಾಗಿಲು ತಟ್ಟಿದರೆ
ಅಲ್ಲಿ ಸಾಲುಗಟ್ಟಿ ನಿಂತ
ಇರುವೆಗಳು !

4

ಕವಿತೆಗಳು
ಸಿಹಿಯಾಗಿದ್ದರೆ
ಅಕ್ಷರಗಳು

ಇರುವೆಗಳಂತೆ
ಬಂದು ಮುತ್ತಿ ಕೊಳ್ಳುತ್ತವೆ

5

ಇಂದು ಸಂಜೆ ನಾನದೆಷ್ಟು
ಹಗುರವಾಗಿದ್ದೆ ಎಂದರೆ
ಇರುವೆಯ ಮೇಲೆ ಕುಳಿತು
ವಾಯು ವಿಹಾರ ಮಾಡಿದೆ

6

ಬರೆಯಲಿರುವ
ನನ್ನ ಒಂದು ಕವಿತೆಯ
ಮೊದಲ ಅಕ್ಷರದಂತೆ ನನ್ನೆಡೆಗೆ
ಹರಿದು ಬರುತ್ತಿದೆ ಒಂದು ಇರುವೆ

7

ಒಂದು ಇರುವೆ
ನನ್ನ ಬಲವಾಗಿ ಕಚ್ಚಿತು
ಯಾವ ಜನ್ಮದ ಸಾಲವೋ
ಈ ಜನ್ಮದಲ್ಲಿ ತೀರಿತು

8

ನದಿಯಲ್ಲಿ ಉಸಿರಿಲ್ಲದೆ
ತೇಲುತ್ತಿರುವ ದೇಹದ ಮೇಲೆ
ಉಸಿರಾಡುತ್ತಾ
ಇರುವೆ

# ಕಂಡದ್ದೆಲ್ಲಾ ಕಣ್ಣು ...

1

ಅವಳು ಕಣ್ಣು ಹೊಡೆದಳು
ಇವನೊಳಗೆ
ಇನ್ನೇನೋ ಒಡೆದ ಸದ್ದು

2

ಹೆಣ್ಣು ನವಿಲಿಗೆ
ಎರಡೇ ಕಣ್ಣು
ಕುಣಿವ ಗಂಡಿಗೋ
ಮೈಯೆಲ್ಲಾ ಕಣ್ಣು !

3

ಇನ್ನೊಬ್ಬರ ಕಣ್ಣೊಳಗೆ
ತನ್ನ ಕಾಣಲು
ಕಣ್ಣಷ್ಟೇ
ಸಾಕಾಗದು !

4

ತನ್ನ
ಕಾಯುವ ರೆಪ್ಪೆಯನ್ನು
ಕಾಣಲು ಕಣ್ಣು
ಅಸಹಾಯಕ !

5

ನೋಡೂದಕ್ಕಷ್ಟೇ ಅಲ್ಲ
ನೋಡದಿರೂದಕ್ಕೂ
ಕಣ್ಣು ಬೇಕು !

6

ಹುಟ್ಟು ಕುರುಡನೂ
ತನ್ನೊಳಗೊಂದು
ಕನ್ನಡಿ
ಬಚ್ಚಿಟ್ಟು ಕೊಂಡಿರುವನು !!

7

ಕಣ್ಣಿಲ್ಲದವನಿಗೆ
ಕತ್ತಲೂ ಇಲ್ಲ !

8

ಸೂರ್ಯನ
ಕಣ್ಣು ಕೊಟ್ಟು
ನೋಡಬಲ್ಲವನು
ಕುರುಡ !

9

ಬೆಳಕಿದ್ದಷ್ಟೇ
ಕಣ್ಣು
ಅಥವಾ ...
ಕಣ್ಣಿದ್ದಷ್ಟೇ ಬೆಳಕು !?

10

ಬೀಜ
ಕಣ್ಣು ತೆರೆಯಲು
ಮಣ್ಣ ಆಳಕ್ಕೆ
ಇಳಿಯಬೇಕು !

11

ಹೊರಗಣ್ಣು
ಮುಚ್ಚಿದ ದಿನ
ಒಳಗಣ್ಣು
ತೆರೆಯಿತು!

# ಹೊಸತು

ಜೀವಮಾನ ಪೂರ್ತಿ
ಓಡಾಡಿದ ಆ ಬೀದಿಯಲ್ಲಿ
ಇದೀಗ ಆ ವೃದ್ಧ
ಥಕ್ಕೆಂದು ನಿಂತು ಬಿಟ್ಟಿದ್ದಾನೆ

ಎಲ್ಲಿಂದ ಬಂದಿದ್ದೇನೆ
ಎಲ್ಲಿಗೆ ಹೋಗಬೇಕು ಎನ್ನೋದು
ಮರೆತು
ಅದಾಗಷ್ಟೇ ಭೂಮಿಯಿಂದ
ಮೊಳಕೆಯೊಡೆದ ಸಸಿಯಂತೆ
ಮಿಕ ಮಿಕ ನೋಡುತ್ತಿದ್ದಾನೆ

ಎಲ್ಲವು ಹೊಸತು
ಮರ, ಗಿಡ, ಓಡಾಡುವ ಜನ
ಸದ್ದು ಮಾಡುತ್ತಿರುವ ವಾಹನಗಳ
ನೋಡಿ ಬೆಕ್ಕಸ ಬೆರಗಾಗಿದ್ದಾನೆ
ಸುತ್ತ ಜನ ಸೇರಿದ್ದಾರೆ
ವಿಚಾರಣೆ ನಡೆಸುತ್ತಿದ್ದಾರೆ
ವಿಳಾಸ ಕೇಳುತ್ತಿದ್ದಾರೆ
ಅವನೋ ಈಗಷ್ಟೇ ಹುಟ್ಟಿದ್ದ ಮಗುವಿನಂತೆ

ಅವರನ್ನು ಮುಗ್ಧವಾಗಿ ನೋಡಿ
ಕಣ್ಣು ಪಿಳಿಕಿಸುತ್ತಿದ್ದಾನೆ

ಪ್ರತಿದಿನ ಅವನನ್ನು ಜೋಪಾನ
ಮನೆ ತಲುಪಿಸುತ್ತಿದ್ದ
ಊರುಗೋಲು ಕೂಡ
ಈಗ ಅಪರಿಚಿತನಂತಾಡುತ್ತಿದೆ

ಅವನ ಪಾಲಿಗೆ ಎಲ್ಲವೂ
ಹೊಸದಾಗಿದೆ
ಎಲ್ಲವನ್ನೂ ಅವನೀಗ
ಹೊಸ ವಿಳಾಸದಿಂದ
ಶುರುಮಾಡಬೇಕು

# ಮಳೆ ನಿಂತ ಮೇಲೆ...

1

**ನಂಬಿಕೆ!**

ಅಪರಿಚಿತ
ಕ್ಷೌರಿಕನ ಕತ್ತಿಗೆ
ಒಂದಿಷ್ಟು ಆತಂಕವಿಲ್ಲದೆ
ಕತ್ತು ಕೊಡೂದು

2

**ಕವಿತೆ**

ಕವಿತೆ ಎಂದರೆ
ಎದೆಗೆ ಚುಚ್ಚಿಕೊಂಡ
ಕಾಣದ ಮುಳ್ಳು
ಒತ್ತಾಯದಿಂದ ಹೊರಗೆಳೆಯ
ಹವಣಿಸಿದರೆ
ಕೈಗೆ ಸಿಗೋದು ಬರಿದೆ ನೋವು
ತಾನೇ ಮಾಗಿ
ಹಣ್ಣಾಗಿ ಒಡೆಯಬೇಕು
ಸಹಜವಾಗಿ ಹೊರಬರಬೇಕು
ಕೀವು

3

**ಎಲ್ಲೆ**

ಗುಬ್ಬಿಯ
ತಲೆ ಮೇಲಿನ ನೆರಳಿಗೆ
ಒಂದು ಪುಟ್ಟ ಎಲೆ ಸಾಕು
ಮನುಷ್ಯನಿಗೋ
ಎಲ್ಲೆ ಇಲ್ಲ
ಆಕಾಶವೂ ಸಾಲೋದಿಲ್ಲ

4

**ಭೂಮಿ**

ಈ ಭೂಮಿ
ಯಾವ ಭಗದಿಂದ
ಉದುರಿ ಬಿದ್ದ
ಬೀಜ!?

5

**ಆಕಾಶ**

ಇಷ್ಟಗಲ ಚಾಚಿರುವ
ಈ ಆಕಾಶ
ಯಾವ ಮರದ ಎಲೆ!?

ಅಮ್ಮ ಹಚ್ಚಿದ ಒಲೆ



ಎಷ್ಟೋ ವರುಷಗಳ ಹಿಂದೆ ಮಾಟುಂಗಾದ ಕನ್ನಡ ಸಂಘದ ಪುಟ್ಟ ಕೋಣೆಯಲ್ಲಿ ಪುಸ್ತಕಗಳ ಕಪಾಟುಗಳ ನಡುವೆ ಪುಸ್ತಕಗಳಂತೆ ಕೂತ ಹತ್ತಿಪ್ಪತ್ತು ಆಪ್ತರ ನಡುವೆ ನೀನು ಕವಿತೆ ಓದಿದ್ದು ನನ್ನ ಉಜ್ವಲ ನೆನಪುಗಳಲ್ಲಿ ಒಂದು. ಭೋರ್ಗರೆಯುವ ಮಳೆಗಾಳಿಯ ನಡುವೆ ಹೆಮ್ಮರವೊಂದರಲ್ಲಿ ಸಿಕ್ಕಿಕೊಂಡು ಒದ್ದಾಡುವ ಗಾಳಿಪಟದ ಚಿತ್ರಣವಿತ್ತು ಅದರಲ್ಲಿ. ಊರಿನಿಂದ ತಂಗಿ ಬರೆದ ಪತ್ರದ ಒಕ್ಕಣಿಕೆಯಿತ್ತು. ನಂತರ ಬಂದ ನಿನ್ನ ಕವನ ಸಂಕಲನಕ್ಕೆ ನಿನ್ನದೇ ತೀವ್ರ ಸಾಲುಗಳನ್ನೇ ಪೋಣಿಸಿ ಹಿನ್ನುಡಿಯ ರೂಪದಲ್ಲಿ ಶುಭಾಶಯ ಹೇಳಿದ್ದೆ. "ಅಮ್ಮ ಹಚ್ಚಿದ ಒಲೆ"ಯ ಈ ಕವಿತೆಗಳೂ ಸಹ ಅದೇ ಕಾವಿನಲ್ಲಿ ನನ್ನನ್ನು ಆವರಿಸಿಕೊಂಡಿದೆ.

"ಅಮ್ಮ ಹಚ್ಚಿದ ಒಲೆ"ಯಿಂದಲೇ ಎಲ್ಲ ಜೀವಗಳ ಪಯಣದ ಶುರುವಾತು. ಅಕ್ಷರ ಕೇಂದ್ರವೇ ಆ ಒಲೆ. ಆ ಕಾವಿನ ವಿಸ್ತರಣೆಯೇ ನಮ್ಮೆಲ್ಲರ ವಿಕಾಸ. ಸ್ನಾನಕ್ಕೆ ನೀರೂ ಅಲ್ಲೇ ಕುದಿಯಬೇಕು, ಒಣಮೀನೂ ಅಲ್ಲೇ ಸುಡಬೇಕು, ಹಬ್ಬದ ಚೀರೂ ಅಲ್ಲೇ ಉಕ್ಕಬೇಕು...ಮಗುವಿನ ಹಾಲುಗೆನ್ನೆಯ ದಿಟ್ಟಿ ಬೊಟ್ಟಿನ ಕಪ್ಪೂ ಅಲ್ಲಿಂದಲೇ ಬರಬೇಕು... ರೂಪಕ ಎಂದು ಕರೆದರೆ ಜುಜುಬಿಯಾಗಿ ಬಿಡಬಹುದಾದ ಒಂದು ಪರಮ ಮೌಲ್ಯ ಈ ಒಲೆ. ಮತ್ತು ಅದರ ಹಿಂದಿನ ಮಸಿ ಹಿಡಿದ ಗೋಡೆ. ಸಾಮಾಜಿಕ ಸಂಬಂಧಗಳೆಲ್ಲ ವ್ಯಸ್ತಗೊಂಡಿರುವ, ವ್ಯಗ್ರಗೊಂಡಿರುವ ಈ ನಮ್ಮ ಸಮಯದಲ್ಲಿ ಎಲ್ಲ ಗಾಯಗಳನ್ನೂ ಮಾಯಿಸಬಲ್ಲ ಏಕಮೇವ ಮದ್ದು ಪ್ರತಿ ಜೀವಿಯಲ್ಲಿರಬೇಕಾದ ತಾಯ್ತನ. ನಿನ್ನ ಈ ಎಲ್ಲ ರಚನೆಗಳೂ ಈ ತಾಯ್ತನವೆಂಬ ಆವರಣಕ್ಕಾಗಿನ ತೀವ್ರ ತುಡಿತಗಳಾಗಿವೆ. ಅವುಗಳ ಅಮೃತ ಹಸ್ತ ಸಹಜೀವಗಳನ್ನು ಸ್ಪರ್ಶಿಸಲು ಬೆಳಕಿನಂತೆ ಚಾಚುತ್ತಿವೆ.

ಜಯಂತ ಕಾಯ್ಕಿಣಿ

ಇರುವ
ಪ್ರಕಾಶನ